UNIVERSAL LIBRARY
OU_198084
UNIVERSAL LIBRARY

# ಉರ್ದೂ ಕಥಾವಲಿ


ಲೇಖಕರು:

ಡಾ॥ ಜಾಕಿರ ಹುಸೇನ ಪಿಎಚ್. ಡಿ.

ಡಾ॥ ಅಖ್ತರ ಹುಸೇನ ರಾಯಪುರಿ ಪಿಎಚ್. ಡಿ.

ಡಾ॥ ಸಧೀಕ ಹುಸೇನ ನಜಮೀ ಪಿಎಚ್. ಡಿ.

ಅನುವಾದಕರು:

ಶ್ರೀ. ಗುರುನಾಥ ಜೋಶಿ



ಭಾರತೀಯ ಸಾಹಿತ್ಯ ಪ್ರಕಟನಾಲಯ,

ಧಾರವಾಡ.



ಮನೋಹರ ಗ್ರಂಥಭಾಂಡಾರ

ಧಾರವಾಡ.



ಮೊದಲ ಮುದ್ರಣ ] ೧೯೪೩ [ ಬೆಲೆ ೦-೪-೦

# ಇದೇ ಲೇಖಕರ ಪುಸ್ತಕಗಳು

೧. ಪರಿಣೀತಾ ( ಜಯಕರ್ನಾಟಕ ಗ್ರಂಥಮಾಲೆ )

೨. ಸಾಲುದೀಪ ( ,, ,, )

೩. ಚಂದ್ರನಾಥ

೪. ದೇವದಾಸ

೫. ಬಿಂದುವಾಸಿನಿಯ ಮಗ

೬. ಪ್ರೇಮಪಥ

೭. ಕರ್ನಾಟಕದ ಬಲಿದಾನ

೮. ಗಾಂಧೀವಿಚಾರದೋಹನ

೯. ಕಾಶ್ಮೀರ ಪ್ರವಾಸ

೧೦. ಕನ್ನಡ ಕತೆಗಳು ( ಹಿಂದೀಯಲ್ಲಿ )

# ಅರ್ಪಣ

" ಕಷ್ಟಪರಂಪರೆಯಲ್ಲಿಯೆ ಮಾನಪತ್ರಕ್ಕೆ
ಒಪ್ಪುವಂತೆ ಕಾರ್ಯಮಾಡಬಲ್ಲ "

ಎಂದು ಸಲಹೆಯಿತ್ತು,

ಸಾಹಿತ್ಯಸೇವೆಗೆ ಪ್ರೋತ್ಸಾಹಿಸಿದ

**ಬಂಧು ಶ್ರೀ. ಸಿದ್ಧನಾಥ ಪಂತರಿಗೆ**

ಪ್ರೀತ್ಯಾದರಪೂರ್ವಕವಾಗಿ ಈ ಪ್ರಥಮಪುಷ್ಪವು
ಸಮರ್ಪಿತವಾಗಿದೆ.

# Foreword

*by*

**A. M. Shaikh** *Esq., M. A.,*

Chief Officer, Municipal Borough, Dharwar.

I must congratulate Mr Gurunath Joshi on this venture in a new channel of literature. He has already to his credit some publications in Kannada, but this time he has explored new regions for his literary endeavours; and I think that his versatile knowledge of more than one language and his broader vision are mainly responsible for this departure. He has selected a few prominent literary figures in Urdu and has presented them in Kannada in a manner worthy of praise. Though the rendering is designed to be true to the original, it is not a mere translation. The pieces presented in this booklet are at once original both in language and in style The style is as simple as it is racy and indicates penmanship that is not amateurish.

Not only literature of this type is highly welcome in the present conditions, political and cultural, but it is an imperative necessity of the time. The social structure seems as it were to be on

the brink of disruption mainly owing to the poison of communalism and other disintegrating forces born of a narrow outlook. Provincialism has come to gain such a sway on our minds that there is scarcely an aspect of our life that it has not invaded. The object of Mr. Joshi, I feel, is to do his best to eradicate this canker. No doubt it is a modest attempt, but it is highly laudable. Muslims and Hindus have both ancient cultures which are largely original and independent with the result that each can draw upon the other and be richer for it. Mr. Joshi has ventured to explore the vast treasures of Urdu literature and give to the Kannada-knowing public an insight into the thought and culture it contains. He is thus not only making a contribution to the Kannada literature but is rendering a singular service to the society. Should further endeavours be made in this novel form of literature, as I hope they will, they will go a long way in bridging the gulf between the two ancient communities and literatures. As I have already said, it is an extremely laudable attempt of Mr. Joshi and I am confident that it will receive all the sympathy and encouragement it deserves.

Dharwar,

1st January 1942.

# ನಿವೇದನೆ

ಸೋದರ ಪ್ರಾಂತಗಳಲ್ಲಿ ಭಾರತೀಯ ಸಾಹಿತ್ಯಾಭಿರುಚಿಯು ದಿನದಿನಕ್ಕೆ ಹೆಚ್ಚುತ್ತಿದೆ. ಭಾರತದ ಭಿನ್ನ ಭಿನ್ನ ಭಾಷೆಗಳಲ್ಲಿಯ ಸಾಹಿತ್ಯವನ್ನು ಅರಿಯಬೇಕೆಂಬ ಬುದ್ಧಿ ಜಾಗೃತವಾಗಿದೆ. ಅದರ ಪರಿಣಾಮವಾಗಿ ಅನೇಕ ಭಾರತೀಯ ಸಾಹಿತ್ಯ ಪ್ರಕಟನಾಲಯಗಳು ಭಿನ್ನ ಭಿನ್ನ ಪ್ರಾಂತಗಳಲ್ಲಿ ಹುಟ್ಟಿ ಭಾರತೀಯ ಸಾಹಿತ್ಯದ ಸವಿಯನ್ನು ರಾಷ್ಟ್ರೀಯ ಭಾಷೆಯಾದ **ಹಿಂದುಸ್ತಾನಿ**ಯ ಮತ್ತು ಪ್ರಾಂತೀಯ ಭಾಷೆಯ ಮುಖಾಂತರವಾಗಿ ಸವಿಯಿಸುತ್ತಲಿವೆ. ಇದೇ ಉದ್ದೇಶದಿಂದ ನಾನು ಕಾರ್ಯವಮಾಡಬೇಕೆಂದು 'ಭಾರತೀಯ ಸಾಹಿತ್ಯ ಪ್ರಕಟನಾಲಯ'ವನ್ನು ಸ್ಥಾಪಿಸಿ, ಅದರ 'ಉರ್ದೂ ಕಥಾವಲಿ' ಯೆಂಬ ಪ್ರಥಮ ಪುಷ್ಪವನ್ನು ಸೋದರ ಸೋದರಿಯರ ಅಡಿಯಲ್ಲಿ ಸಮರ್ಪಿಸಿದ್ದೇನೆ. ಹೀಗೆಯೆ ಇನ್ನೂ ಕಾರ್ಯವನ್ನು ಮಾಡಬೇಕೆಂಬಾಸೆ ಇದೆ. ಅದನ್ನು ಪೂರ್ತಿಗೊಳಿಸುವುದು ಕನ್ನಡಿಗರ ಕೆಲಸ. ಅವರ ಉದಾರ ಕೈಯು ಮುಂದೆ ಬಂದರೆ ಯಾವ ಕಾರ್ಯವು ತಾನೆ ಅಸಾಧ್ಯ?

ಈ ಪುಸ್ತಕವನ್ನು ಇನ್ನಿಷ್ಟು ದೊಡ್ಡದನ್ನಾಗಿ ಮಾಡಿ ಕನ್ನಡಿಗರಿಗೆ ಹೃತ್ಪೂರ್ವಕವಾಗಿ ಸಲ್ಲಿಸಬೇಕೆಂದಿದ್ದೆ. ಕಾಗದದ ಬೆಲೆ ವಿಪರೀತವಾಗಿ ಏರಿಹೋದುದರಿಂದಲೂ ಕಾಗದದ ಕೊರತೆಯು ಬಿದ್ದುದರಿಂದಲೂ ಇಷ್ಟು ಚಿಕ್ಕ ರೂಪದಲ್ಲಿ ಪ್ರಥಮ ಪುಷ್ಪವನ್ನು ಅರ್ಪಿಸಬೇಕಾಯಿತಲ್ಲಾ ಎಂದು ಹೃದಯವು ಕೊರಗುತ್ತಿದೆ. ಕನ್ನಡಿಗರು ಉದಾರ ಹೃದಯದಿಂದ ನೆರವಾದರೆ ದೊಡ್ಡ ಪುಷ್ಪವನ್ನು ಅವರಿಗೆ ಸಲ್ಲಿಸಲಾಗುವುದೆಂಬ ನಂಬಿಕೆ ನನಗಿದೆ.

ಈ ಪುಟ್ಟ ಪುಸ್ತಕಕ್ಕೆ ಸುಂದರ, ಬೆಲೆಯುಳ್ಳ ಮುನ್ನುಡಿಯನ್ನು ಬರೆದುಕೊಟ್ಟುದಕ್ಕಾಗಿ ಶ್ರೀ. ಏ. ಎಮ್. ಶೇಖ, ಎಂ. ಎ. (ಚೀಫ್ ಆಫೀಸರ, ಧಾರವಾಡ ಮುನಸಿಪಲ್ ಬರೋ) ಅವರಿಗೆ ನಾನು ಚಿರಋಣಿ. ಜಯಕರ್ನಾಟಕದಲ್ಲಿ ಪ್ರಕಟವಾದ ಕತೆಗಳನ್ನು ಈ ರೂಪಕ್ಕೆ ತಂದುಕೊಟ್ಟ ಶ್ರೀ. ಬೆಳಗಾವಿ ರಾಮಚಂದ್ರರಾಯರಿಗೂ ಶ್ರೀಮತಿ ಶ್ಯಾಮಲಾದೇವಿಯವರಿಗೂ ನನ್ನ ಹೃತ್ಪೂರ್ವಕ ಅಭಿನಂದನೆಗಳು. ಅಲ್ಲದೆ ಕಲಾಸಿಂಧು ಮುದ್ರಣಾಲಯದ ಕಾರ್ಯಕರ್ತರೂ ಅಭಿನಂದನೆಗೆ ಪಾತ್ರರು.

ಭಾರತೀಯ ಸಾಹಿತ್ಯ ಪ್ರಕಟನಾಲಯ,
ಧಾರವಾಡ.
೧—೧—೧೯೪೩

ಗುರುನಾಥ ಜೋಶಿ

# ಉರ್ದೂ ಕಥಾಸಾಹಿತ್ಯದ ಪರಿಚಯ

ಸುಲ್ತಾನರ ' ಮತ್ತು .ಬಾದಶಾಹರ ನಿವಾಸಸ್ಥಾನಗಳ ಸುತ್ತ ಇದ್ದ ಮುಸಲ್ಮಾನ ಸೈನಿಕರ ಶಿಬಿರಗಳಲ್ಲಿ ಆಡಲ್ಪಡುತ್ತಿದ್ದ ಹಿಂದೀ ಭಾಷೆಯೊಡನೆ ಅರಬಸ್ತಾನ, ಇರಾಣ ಮತ್ತು ತುರ್ಕಸ್ತಾನದಿಂದ ಬಂದು ಹಿಂದುಸ್ತಾನದ ಮೇಲೆ ದಾಳಿಮಾಡಿ, ಹಿಂದುಸ್ತಾನದಲ್ಲಿಯೇ ನೆಲಸಿದ ಮುಸಲ್ಮಾನರ ಅರಬ್ಬಿ,ಫಾರಸಿ, ತುರ್ಕಿ ಭಾಷೆಗಳು ಮಿಶ್ರಿತವಾಗಿ ಉರ್ದೂ ಭಾಷೆಯು ಹುಟ್ಟಿತು. ಇದು ಸುಮಾರು ಐದು ನೂರು ವರ್ಷಗಳವರೆಗೆ ಮಾತನಾಡುವ ಭಾಷೆಯೆ ಆಗಿದ್ದಿತು. ಅದಕ್ಕೆ ರೇಖ್ತಾ, ದಕ್ಖಿನೀ, ಹಿಂದುವೀ, ಹಿಂದುಸ್ತಾನೀ ಎಂಬ ಹೆಸರುಗಳೂ ಇವೆ. ಅವೆಲ್ಲವೂ ಹಿಂದುಸ್ತಾನದಲ್ಲಿಯೆ ಉರ್ದೂ ಭಾಷೆಯು ಹುಟ್ಟಿತೆಂದು ಹೇಳುತ್ತವೆ. ಆದರೆ ಅದು ಕನ್ನಡನಾಡಿನ ಯಾತ್ರೆಯನ್ನು ಮಾಡದೆ ಹೋಗಿದ್ದರೆ ಅದಕ್ಕೆ ಸಾಹಿತ್ಯಿಕ ರೂಪವು ದೊರೆಯುತ್ತಿರಲಿಲ್ಲ.

ಗೋವಳಕುಂಡ ಮತ್ತು ವಿಜಾಪುರದ ಕುತುಬಶಾಹಿ ಮತ್ತು ಆದಿಲಶಾಹಿ ದರಬಾರಗಳಲ್ಲಿ ಉರ್ದೂ ಸಾಹಿತ್ಯದ ಆರಂಭವು ಆಯಿತು. **ಗೋವಳಕುಂಡದ ಅರಸನಾದ ಮುಹಮ್ಮದ ಕುಲೀ ಕುತುಬಶಾಹನೇ ಉರ್ದೂ ಸಾಹಿತ್ಯದ ಜನ್ಮದಾತ ಪ್ರಥಮ ಕವಿ.** ಅವನು 'ಕುತಬಾ' 'ಮುಆನಿ' ಎಂಬ ನಾಮಧ್ಯೇಯಗಳಿಂದ ಕವಿತೆಗಳನ್ನು ರಚಿಸಿದ್ದಾನೆ. ಅವನ ಕಾವ್ಯಸಂಗ್ರಹದ ಪುಸ್ತಕವು ಇನ್ನೂ ದಕ್ಷಿಣ ಹೈದರಾಬಾದದ ಸರಕಾರೀ ಪುಸ್ತಕಾಲಯದಲ್ಲಿ ನೋಡಲು ಸಿಗುತ್ತದೆ.

ಹೀಗೆ ಉರ್ದೂ ಭಾಷೆಯು ಕನ್ನಡ ನಾಡಿನಲ್ಲಿ ಸಾಹಿತ್ಯ ರೂಪವನ್ನು ಪಡೆದು ಈಗ ಒಂದು ವಿಶಾಲ ಸಾಹಿತ್ಯವಾಗಿ ನಮ್ಮೆದುರಿನಲ್ಲಿದೆ. ಅದರಲ್ಲಿಯೂ ಅನೇಕ ಉತ್ತಮೋತ್ತಮ

ಗ್ರಂಥಗಳು, ಕತೆಗಳು, ಕಾದಂಬರಿಗಳು, ಮಾಸಪತ್ರಿಕೆಗಳು ಇವೆ. ಅವೆಲ್ಲವುಗಳನ್ನು ಕುರಿತು ಸವಿಸ್ತಾರವಾಗಿ ಹೇಳಲು ಇಲ್ಲಿ ಸ್ಥಾನವಿಲ್ಲ. ಆದರೆ ಕಥಾಸಾಹಿತ್ಯವನ್ನು ಕುರಿತೂ ಅತ್ಯಂತ ಸಂಕ್ಷೇಪದಲ್ಲಿಯೇ ಹೇಳಬೇಕಾಗಿದೆ ಸ್ಥಳಾಭಾವದ ಮೂಲಕ.

ಉರ್ದೂದಲ್ಲಿಯೂ ಕಥಾಸಾಹಿತ್ಯದ ಆರಂಭವು ಭಾರತದ ಇತರ ಭಾಷೆಗಳಲ್ಲಿ ಆದಂತೆಯೇ ಆಯಿತು. ಮೊದಲು ಅದ್ಭುತರಮ್ಯ (Romantic) ಕಥಾನಕಗಳೇ ಬಂದುವು. ಇನಶಾ ಅಲ್ಲಾಹಖಾನನು 'ರಾನೀ ಕೇತಕೀಕೀ ಕಹಾನಿ' ಎಂಬ ಅತ್ಯುತ್ತಮವಾದ ರಮ್ಯಕತೆಯನ್ನು ಬರೆದನು. ಇದು ಉರ್ದೂಭಾಷೆಯ ಪ್ರಥಮ ಸ್ವತಂತ್ರವಾದ ಕತೆ. ಅನ್ಯ ಭಾಷೆಗಳಿಂದ ಇದಕ್ಕೂ ಮೊದಲು 'ತೋತಾ' ಎಂಬ ಕತೆಯು ಬಂದಿತ್ತು. ಅದು 'ಶುಕಸಪ್ತತಿ'ಯ ಇಂಗ್ಲೀಷು ಅನುವಾದದಿಂದ ಬಂದುದು. ಸ್ವತಂತ್ರ ಕತೆಗಾರಿಕೆಗೆ 'ಸರೂರ,' 'ನಜೀರ ಅಹಮ್ಮದ', 'ಆಜಾದ', 'ಶರರ', 'ರುಸಲ್ವಾ' ಮೊದಲಾದ ಕಥಾಲೇಖಕರು ನಡುಕಟ್ಟಿ ನಿಂತು ಕಥಾ ಸಾಹಿತ್ಯವನ್ನು ಬೆಳೆಯಿಸಿದರು.

ಆದರೆ ಉರ್ದೂಭಾಷೆಯ ಆಧುನಿಕ ಕಥಾಸಾಹಿತ್ಯಕ್ಕೆ ಜನ್ಮಕೊಟ್ಟವರು ಹಿಂದೀ ಕಾದಂಬರೀ ಸಮ್ರಾಟರಾದ ಪ್ರೇಮಚಂದರೇ. ಅವರ ಆಗಮನದಿಂದ ಉರ್ದೂ ಕಥಾ ಸಾಹಿತ್ಯವು ಮಿರುಗುಗೊಂಡು ಬೆಳೆಯತೊಡಗಿತು. ಸುದರ್ಶನ, ಅಹಮ್ಮದ ಶುಜಾ, ಅಹಮ್ಮದಶಾಹ ಬುಖಾರೀ, ಇಮತ್ಯಾಜ ಅಲೀ 'ತಾಜ', ಆಬಿದ ಅಲೀ, ಗೌರೀ ಶಂಕರಲಾಲ 'ಅಖ್ತರ',

ಮೊದಲಾದವರು ಉರ್ದೂ ಕಥಾಸಾಹಿತ್ಯಕ್ಕೆ ನೀರೆರೆದು ಬೆಳೆಯಿಸಿದವರಲ್ಲಿ ಉಲ್ಲೇಖನೀಯರಾಗಿದ್ದಾರೆ.

ಅತ್ಯಾಧುನಿಕ ಉರ್ದೂ ಕಥಾಸಾಹಿತ್ಯಾಕಾಶದಲ್ಲಿ ಮಿರುಗುವ ತಾರೆಗಳೆಂದರೆ ಸುದರ್ಶನ, ಮುಹಮ್ಮದ ಮುಜೀಬ, ಅಖ್ತರ ಹುಸೇನ ರಾಯಪುರೀ, ಅಹಮ್ಮದ ಅಲೀ, ಅಲೀ ಅಬ್ಬಾಸ ಹುಸೈನೀ, ಜಾಕಿರ ಹುಸೇನ, ಸದೀಕ ಹುಸೇನ ನಜಮೀ, ಉಪೇಂದ್ರನಾಥ 'ಅಶ್ಕ', ಕೃಷ್ಣಚಂದ್ರ ಮೊದಲಾದವರು. ಇದರಲ್ಲಿ ಜಾಕಿರ ಹುಸೇನ, ಅಖ್ತರ ಹುಸೇನ ರಾಯಪುರೀ, ಸದೀಕ ಹುಸೇನ ರಾಯಪುರೀ ಇವರ ಕತೆಗಳನ್ನು ಕೊಡಲಾಗಿದೆ. ಅವುಗಳ ಮೇಲಿಂದ ಉರ್ದೂಕಥಾಸಾಹಿತ್ಯದ ಪ್ರವಾಹವು ಯಾವ ರೀತಿಯಾಗಿ ಹರಿಯುತ್ತಿದೆ, ಯಾವ ಮಟ್ಟಕ್ಕೆ ಏರುತ್ತಿದೆ, ಯಾವ ಧ್ಯೇಯದ ಕಡೆಗೆ ಹೊರಟಿದೆ ಎನ್ನುವುದರ ಕಲ್ಪನೆಯು ಬಾರದೆ ಇರದು. ಅಲ್ಲದೆ ಉರ್ದೂ ಕಥಾಸಾಹಿತ್ಯದ ಒಲವು ವಾಸ್ತವಿಕತೆಯ ಕಡೆಗಿದೆಯೆಂಬುದೂ ಕಥಾನಕಕ್ಕೆ ಕಡಮೆ, ಮಾನಸಶಾಸ್ತ್ರಕ್ಕೆ ಹೆಚ್ಚು ಗಮನವು ಕೊಡಲ್ಪಡುತ್ತಿದೆಯೆಂಬುದೂ ತಿಳಿಯದೆ ಇರದು. ಇಂದಿನ ಉರ್ದೂ ಕಥಾ ಲೇಖಕನು ಬೀಭತ್ಸವನ್ನು ಬೀಭತ್ಸವನ್ನಾಗಿಯೂ ತೋರಿಸಲು ಹಿಂಜರಿಯಲಾರ. ಪ್ರಗತಿಶೀಲತೆಯು ಅವನ ಒಂದು ದೊಡ್ಡ ಗುಣವಾಗಿದೆ.

# ಅಬ್ಬೂಖಾನರ ಆಡು

[ ಡಾಕ್ಟರ ಜಾಕೀರ ಹುಸೇನ ಸಾಹಬ್ ಅವರು ದಿಲ್ಲಿಯ ಜಾಮಿಯಾ ಮಿಲ್ಲಿಯಾ ಇಸ್ಲಾಮಿಯದ ಪ್ರಧಾನರು. ಅರ್ಥಶಾಸ್ತ್ರದ ಪಂಡಿತರು. ವರ್ಧಾ ಶಿಕ್ಷಣ ಪದ್ಧತಿಯನ್ನು ನಾಡಿನಲ್ಲಿ ಪ್ರಚಾರ ಮಾಡುವ ಕಾರ್ಯದಲ್ಲಿ ಮೊದಲಿಗರು. ವರ್ಧಾಶಿಕ್ಷಣದ ಪದ್ಧತಿಯನ್ನು ತಯಾರ ಮಾಡಿದವರೇ ಇವರು ಎನ್ನಲು ಅಡ್ಡಿಯಿಲ್ಲ. ಶಿಶು ಶಿಕ್ಷಣದ ಬಗ್ಗೆ ಇವರಿಗೆ ಅಗಾಧ ಜ್ಞಾನ-ಅನುಭವ ಉಂಟು. ಭಾಷೆಯು ಸರಳವಾಗಿರುವುದರಿಂದ ಇವರ ಗಹನ ವಿಚಾರಗಳನ್ನು ಬಾಲಕರೂ ತಿಳಿದುಕೊಳ್ಳಬಲ್ಲರು. 'ಅಬ್ಬೂಖಾನರ ಆಡು' ಇದಕ್ಕೆ ತಕ್ಕ ಉದಾಹರಣೆಯಾಗಿದೆ. ಇವರು ಉರ್ದು ಸಾಹಿತ್ಯಕ್ಕೆ ಸಲ್ಲಿಸಿದ ಸೇವೆಯು ಅಪಾರವಾಗಿದೆ. ]

ಹಿಮಾಲಯ ಪರ್ವತದ ಹೆಸರನ್ನು ನೀವು ಕೇಳಿರಬಹುದು. ಇದರಷ್ಟು ದೊಡ್ಡ ಪರ್ವತವು ಜಗತ್ತಿನಲ್ಲೇ ಇಲ್ಲ. ಇದರ ಉದ್ದವೂ ಎತ್ತರವೂ ಬಹಳವಾಗಿದೆ. ಎತ್ತರವು ಎಷ್ಟಿದೆ, ಇದರ ತುಟ್ಟ ತುದಿಯಲ್ಲಿ ಏನಿದೆಯೆಂಬುದನ್ನು ಕಂಡುಹಿಡಿಯುವುದು ಯಾರಿಗೂ ಸಾಧ್ಯವಾಗಿಲ್ಲ. ಈ ಪರ್ವತದಲ್ಲಿ ಅಲ್ಲಲ್ಲಿ ಎಷ್ಟೋ ಜನವಸತಿಗಳು ಇವೆ. ಅವುಗಳಲ್ಲಿ ಅಲ್ಮೋಡಾ ವಸತಿಯೂ ಒಂದು.

ಅಲ್ಮೋಡಾದಲ್ಲಿ ಒಬ್ಬ ಮಿಯಾ ಇರುತ್ತಿದ್ದರು, ಅವರ ಹೆಸರು ಅಬ್ಬೂಖಾನ ಎಂದಿತ್ತು. ಆಡು ಕುರಿ ಸಾಕುವ

ದೆಂದರೆ ಅವರಿಗೆ ಬಹು ಇಷ್ಟ. ಒಬ್ಬೊಂಟಿಗರು ಇದ್ದರು. ಒಂದೆರಡು ಆಡುಗಳನ್ನು ಸಾಕುತ್ತಿದ್ದರು, ಅವನ್ನು ದಿನಾಲು ಮೇಯಿಸಿಕೊಂಡು ಬರುತ್ತಿದ್ದರು. ಅವಕ್ಕೆ ವಿಚಿತ್ರ ವಿಚಿತ್ರ ವಾದ ಹೆಸರುಗಳನ್ನೂ ಇಡುತ್ತಿದ್ದರು—'ಕಲ್ಲೂ' 'ಮುಂಗಿಯಾ' 'ಗುಜರೀ' 'ಹುಕಮಾ' ಎಂದು. ಅವು ಗಳ ಕೂಡ ಅದೇನೇನೋ ಮಾತುಗಳನ್ನೂ ಆಡುತ್ತಿದ್ದರು. ಸಾಯಂಕಾಲ ಮನೆಗೆ ತಂದು ಕಟ್ಟುತ್ತಿದ್ದರು. ಅಲ್ಮೋಡಾ ಗುಡ್ಡಗಾಡು ಪ್ರದೇಶವಿರುವುದರಿಂದ ಆಡುಗಳೂ ಪ್ರದೇಶಕ್ಕೆ ತಕ್ಕಂತಹವುಗಳೇ ಇರುತ್ತಿದ್ದುವು.

ಅಬ್ಬೂಖಾನರು ಬಡವರು, ಭಾಗ್ಯಹೀನರು. ಅವರ ಆಡು ಗಳು ಒಂದಿಲ್ಲೊಂದು ದಿನ ಕಟ್ಟಿದ ಹಗ್ಗವನ್ನು ಹರಿದು ಕೊಂಡು ರಾತ್ರಿಯಲ್ಲಿ ಓಡಿಹೋಗುತ್ತಿದ್ದುವು. ಗುಡ್ಡದ ಆಡು ಗಳು ಕಟ್ಟಿಸಿಕೊಂಡಿರುವಂಥ ಸ್ವಭಾವವುಳ್ಳವುಗಳಲ್ಲ. ಅವು ಓಡಿ ಗುಡ್ಡದ ಅಡವಿಗೆ ಹೋಗುತ್ತಿದ್ದುವು. ಮತ್ತು ಅಲ್ಲಿರುವ ತೋಳವು ಅವನ್ನು ತಿಂದುಬಿಡುತ್ತಿದ್ದಿತು. ಆದರೆ ನಮಗೊಂದು ಆಶ್ಚರ್ಯ. ಏನೆಂದರೆ ಅವುಗಳಿಗೆ ಅಬ್ಬೂ ಖಾನರ ಪ್ರೀತಿಯ ಆಸೆ, ಸಾಯಂಕಾಲಕ್ಕೆ ತಿಂಡಿಯ ಆಸೆ, ತೋಳದ ಬೆದರಿಕೆ ಇವು ಓಡಿಹೋಗುವ ಮಾರ್ಗದಲ್ಲಿ ಅಡ್ಡ ಬರುತ್ತಿರಲಿಲ್ಲ ಎಂಬುದು. ಇದಕ್ಕೆ ಗುಡ್ಡದ ಪ್ರಾಣಿಗಳಿಗೆ ಸ್ವಾತಂತ್ರ್ಯದ ಮೇಲೆ ಪ್ರೀತಿಯಿರುವುದೆಂಬ ಕಾರಣವು ಇರ ಬಹುದು. ಯಾರು ಎಷ್ಟು ಬೆಲೆ ಕೊಟ್ಟರೂ ಇವು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಳ್ಳಲು ಬಯಸುವುದಿಲ್ಲ. ಆನಂದದ ಕಾರಾಗಾರದಲ್ಲಿರುವುದಕ್ಕಿಂತಲೂ ಕಷ್ಟಗಳನ್ನು ಸಹಿಸುತ್ತಾ ಸ್ವಾತಂತ್ರ್ಯದಿಂದ ಇರುವುದನ್ನು ಇವು ಬಯಸುವುವು.

ಒಂದು ಆಡು ಓಡಿಹೋದರೆ ಆಯಿತು, ಅಬ್ದೂಖಾನರು ತಲೆಯನ್ನು ಹಿಡಿದುಕೊಂಡು ಕುಳಿತುಕೊಳ್ಳುವರು. "ನಾನು ಇವುಗಳಿಗೆ ಎಳೆಯ ಹಸಿರು ಹುಲ್ಲನ್ನು ತಿನಿಸುವೆನು, ನಿರ್ಮಲ ವಾದ ನೀರನ್ನು ಕುಡಿಸುವೆನು, ಕದ್ದು ನೆರೆಹೊರೆಯವರ ಹೊಲದ ಧಾನ್ಯಗಳನ್ನು ತಿನಿಸುವೆನು, ಸಾಯಂಕಾಲ ರುಚಿ ರುಚಿಯಾದ ಕಾಳುಗಳನ್ನು ತಿನ್ನಲು ಹಾಕುವೆನು, ಆದರೂ ಈ ಮೂರ್ಖ ಆಡುಗಳು ಮನೆಯಲ್ಲಿ ನಿಲ್ಲಲು ಬಯಸುವುದಿಲ್ಲ. ಅಡವಿಗೆ ಓಡಿಹೋಗಿ ತಮ್ಮ ನೆತ್ತರವನ್ನು ತೋಳಕ್ಕೆ ಉಣಿಸು ವುದನ್ನು ಬಯಸುವುವು. ಇದು ಏಕೆ?" ಎನ್ನುವುದು ಅವರಿಗೆ ತಿಳಿಯುತ್ತಿದ್ದಿಲ್ಲ.

ಅಬ್ದೂಖಾನರ ಅನೇಕ ಆಡುಗಳು ಹೀಗೆಯೆ ಓಡಹೋಗ ತೊಡಗಿದವು. ಒಂದು ದಿನ ಅವರು ಉದಾಸರಾಗಿ ಎನ್ನ ತೊಡಗಿದರು, "ಇನ್ನು ನಾನು ಆಡುಗಳನ್ನು ಸಾಕುವುದಿಲ್ಲ. ಬದುಕಿನ ದಿನಗಳು ಇನ್ನು ಬಹಳವಾಗಿಲ್ಲ. ಆಡುಗಳಿಲ್ಲದೆ ಹೀಗೆ ಉಳಿದ ದಿನಗಳೂ ಕಳೆದುಹೋಗುವವು. ಆದರೆ ಅವು ಗಳಿಲ್ಲದೆ ಬದುಕಿಗೆ ಸಮಾಧಾನವಾಗುವುದಿಲ್ಲ. ಮೋಹ ಬಹು ಕೆಡುಕಾದುದು. ಆಡುಸಾಕುವುದೂ ಒಂದು ಕೆಟ್ಟ ಚಟವೆಂದೇ ಹೇಳಿದರೆ ತಪ್ಪೇನೂ ಇಲ್ಲ ಎಂದರೂ ಅಡ್ಡಿಯಿಲ್ಲ." ಆಡುಗಳನ್ನು ಸಾಕದೆ ಅಬ್ದೂಖಾನರು ಸ್ವಲ್ಪ ದಿನಗಳನ್ನು ಕಳೆದರು. ಹಾಗೆಯೆ ದಿನಗಳನ್ನು ಕಳೆಯುವುದು ಅವರಿಂದ ಆಗಲಿಲ್ಲ. ಬಳಿಕ ಒಂದು ದಿನ ಒಂದು ಆಡನ್ನು ಕೊಂಡು ತಂದರು. ಆಡು ಇನ್ನೂ ಚಿಕ್ಕದು ಇದ್ದಿತು. ಒಂದು ಒಂದೂಕಾಲು ವರ್ಷ ಅದಕ್ಕಾಗಿರಬಹುದು. ಚಿಕ್ಕದನ್ನು ತಂದು ಒಳ್ಳೆಯ ಹುಲ್ಲು, ಕಾಳು ತಿನಿಸಿ ಅಭ್ಯಾಸಮಾಡಿಸಿಟ್ಟು

ಕೊಂಡರೆ ಗುಡ್ಡದ ಕಡೆಗೆ ಓಡಿಹೋಗುವ ಮನಸ್ಸು ಅದಕ್ಕಾಗಲಿಲ್ಲವೆಂದು ತಿಳಿದು ಈ ಚಿಕ್ಕ ಆಡನ್ನು ತಂದಿದ್ದರು. ಈ ಆಡಿನ ಬಣ್ಣವೂ ಮನಮೆಚ್ಚುವುದಂತಹುದು ಇದ್ದಿತು. ಮಾಟವು ಆಗಿದ್ದಿತಲ್ಲದೆ ಬಣ್ಣವು ಬೆಳ್ಳಗಿದ್ದಿತು. ಕೂದಲುಗಳೂ ಮೈಮೇಲೆ ಹೇರಳವಾಗಿದ್ದುವು. ಅವುಗಳಲ್ಲಿ ಎರಡು ಚಿಕ್ಕ ಕೋಡುಗಳು ಕಪ್ಪಾದುವು ಬಹು ಸುಂದರವಾಗಿ ಕಾಣಿಸುತ್ತಿದ್ದುವು. ಕಣ್ಣುಗಳೂ ಕೆಂಪುಮೂಡಿಯು ಮೇಲಿದ್ದುವು. ಅದನ್ನು ನೀವು ನೋಡಿದ್ದರೆ "ನಾನೂ ಇದನ್ನು ಕೊಳ್ಳದೆ ಬಿಡುತ್ತಿದ್ದಿಲ್ಲ'' ಎನ್ನುತ್ತಿದ್ದಿರಿ! ಇದು ನೋಡುವುದಕ್ಕಷ್ಟೆ ಅಲ್ಲ, ಸ್ವಭಾವದಿಂದಲೂ ಬಹು ಚೆನ್ನಾಗಿದ್ದಿತು. ಪ್ರೀತಿಯಿಂದ ಅಬ್ಬಾಖಾನರ ಕೈಗಳನ್ನು ನೆಕ್ಕುತ್ತಿದ್ದಿತು. ಇದಕ್ಕೆ ಒಂದು ಮಗುವೂ ಆಯಿತು. ಹಾಲನ್ನು ಒಂದು ಚಿಕ್ಕ ಮಗುವು ಕರೆದರೂ ಒದೆಯುತ್ತಿರಲಿಲ್ಲ, ಪಾತ್ರೆಯನ್ನು ಒದೆದು ಉರುಳಿಸುತ್ತಿರಲಿಲ್ಲ. ಅಬ್ಬಾಖಾನರಂತೂ ಅದರ ಪ್ರೇಮಿಗಳಂತಾಗಿ ಹೋದರು. ಇದರ ಹೆಸರನ್ನು ಅವರು 'ಚಂದ್ರಿಕಾ' ಎಂದು ಇಟ್ಟಿದ್ದರು. ಮತ್ತು ಇಡಿ ದಿನವೆಲ್ಲ ಅದರೊಡನೆ ಮಾತನಾಡುತ್ತಿದ್ದರು. ಅದಕ್ಕೆ ಆಗಾಗ್ಗೆ ಅನೇಕ ಜನಗಳನ್ನು ಕುರಿತು ತಮಾಷೆಯಿಂದ ಕೂಡಿದ ಕತೆಗಳನ್ನೂ ಹೇಳುತ್ತಿದ್ದರು.

ತಮ್ಮ ಮನೆಯ ಚಿಕ್ಕ ಅಂಗಳದಲ್ಲಿ ಕಟ್ಟುವುದರಿಂದ ಆಡುಗಳ ಮನಸ್ಸು ಗಾಬರಿಗೊಳ್ಳುತ್ತಿದ್ದುದರಿಂದ ಈ 'ಚಂದ್ರಿಕೆ'ಯ ಸಲುವಾಗಿ ಅಬ್ಬಾಖಾನರು ಒಂದು ವ್ಯವಸ್ಥೆಯನ್ನು ಮಾಡಿದ್ದರು. ಮನೆಯಿಂದ ಸ್ವಲ್ಪ ದೂರದಲ್ಲಿ ಅವರ ಒಂದು ಹೊಲವಿದ್ದಿತು. ಅಲ್ಲಿಂದ ಇಲ್ಲಿಂದ ಮುಳ್ಳು ತಂದು ಅದಕ್ಕೆ ಬೇಲಿಯನ್ನು ಕಟ್ಟಿದ್ದರು. ಅದರ ನಡುವೆ ಅವರು ಚಂದ್ರಿಕೆ

ಯನ್ನು ಕಟ್ಟುತ್ತಿದ್ದರು. ಅದಕ್ಕೆ ಬಹುದೂರದ ವರೆಗೆ ಅಲೆದಾಡಲು ಅನುಕೂಲವಾಗಬೇಕೆಂದು ಉದ್ದವಾದ ಹಗ್ಗವನ್ನು ಕಟ್ಟಿದ್ದರು. ಈ ಹೊಲದಲ್ಲಿ ಚಂದ್ರಿಕೆಯು ಬಹಳ ದಿನಗಳನ್ನು ಕಳೆಯಿತು. ಅಬ್ಬೂಖಾನರಿಗೆ ಇನ್ನು ಇದು ಓಡಿಹೋಗಲಾರದೆಂಬ ವಿಶ್ವಾಸವಾಯಿತು. ಕೊನೆಗೆ ಇದು ಇಲ್ಲಿಯ ವಾತಾವರಣಕ್ಕೆ ಒಗ್ಗಿಕೊಂಡಿತೆಂಬ ಸಂತೋಷ ಅಬ್ಬೂಖಾನರಿಗೆ.

ಆದರೆ ಅಬ್ಬೂಖಾನರು ತಪ್ಪು ತಿಳಿದುಕೊಂಡಿದ್ದರು. ಸ್ವಾತಂತ್ರ್ಯದ ಬಯಕೆಯು ಇಷ್ಟು ಬೇಗ ಹೃದಯದಿಂದ ಬಯಲಾಗಲಾರದು. ಬೆಟ್ಟ-ಗುಡ್ಡ ಅಡವಿಗಳಲ್ಲಿ ಸ್ವಚ್ಛಂದವಾಗಿ ವಿಹರಿಸುವ ಪ್ರಾಣಿಗಳನ್ನು ಮನೆಯಲ್ಲಿ ಕಟ್ಟಿದರೆ ಅವುಗಳ ಜೀವನಕ್ಕೆ ಸಮಾಧಾನವೆನಿಸದು; ಮುಳ್ಳುಬೇಲಿಯಿಂದೊಡಗೂಡಿದ ಹೊಲದಲ್ಲೂ ಅವುಗಳಿಗೆ ಸಮಾಧಾನವಿರದು. ಕಾರಾಗಾರ-ಸೆರೆಮನೆ ಇವುಗಳಲ್ಲಿ ಭೇದವೇನು? ಕಾರಾಗಾರವೆಂದರೆ ಸೆರೆಮನೆ, ಸೆರೆಮನೆಯೆಂದರೆ ಕಾರಾಗಾರ. ಅದು ಚಿಕ್ಕದಾದರೇನು, ದೊಡ್ಡದಾದರೇನು? ಎಲ್ಲವೂ ಒಂದೇ. ಸ್ವಲ್ಪ ದಿನಗಳ ಮಟ್ಟಿಗೆ ಅದು ಸೆರೆಮನೆಯೆಂದು ಎನಿಸಲಿಕ್ಕಿಲ್ಲ; ಬಳಿಕ ಬೆಟ್ಟ-ಅಡವಿಗಳ ನೆನಹು ಬರತೊಡಗುವುದು, ಕೈದಿಯು ಬಂಧನವನ್ನು ಕಿತ್ತೊಗೆಯಲು ಬಯಸುವನು. ಚಂದ್ರಿಕೆಯು ಅಡವಿ-ಬೆಟ್ಟಗಳನ್ನು ಮರೆತಿರುವಳೆಂಬುದನ್ನು ಅಬ್ಬೂಖಾನರು ತಿಳಿದುಕೊಂಡುದು ತಪ್ಪಾಗಿದ್ದಿತು.

ಒಂದು ದಿನ ಮುಂಜಾವು, ಸೂರ್ಯನು ಇನ್ನೂ ಬೆಟ್ಟದ ಆಚೆಯ ಮಗ್ಗಲು ಇದ್ದನು, ಇನ್ನೂ ಮೇಲಕ್ಕೇರಿರಲಿಲ್ಲ.

ಚಂದ್ರಿಕೆಯ ದೃಷ್ಟಿಯು ಬೆಟ್ಟದ ಕಡೆಗೆ ಹೋಯಿತು. ಬಾಯಲ್ಲಿ ಆಹಾರವಿದ್ದುದರಿಂದ ಆಕೆಯು ಮೆಲುಕಾಡಿಸುತ್ತಿದ್ದಳು, ಅದು ನಿಂತು ಹೋಯಿತು; ಆಕೆಯು ಮನದಲ್ಲಿಯೆ ನುಡಿದಳು "ಆ ಬೆಟ್ಟದ ಶಿಖರಗಳು ಅದೆಷ್ಟು ಸುಂದರವಾಗಿರುವುವು! ಅಲ್ಲಿಯ ಹವೆಗೂ ಇಲ್ಲಿಯ ಹವೆಗೂ ಸಾಟಿಯೇನು! ಅಲ್ಲಿ ಹಾರುವುದು, ಕುಣಿಯುವುದು, ಬೀಳುವುದು, ಏಳುವುದು; ಇಲ್ಲಿ ಪ್ರತಿನಿಮಿಷವೂ ಕಟ್ಟಲ್ಪಟ್ಟಿರುವುದು! ಕುತ್ತಿಗೆಗೆ ಇಪ್ಪತ್ತುನಾಲ್ಕು ಗಂಟೆಯೂ ಈ ಹಗ್ಗ! ಇಂಥ ವಾತಾವರಣದಲ್ಲಿ ಕತ್ತೆ ಕುದುರೆಗಳು ಇರಬಹುದು; ಆದರೆ ನಮಗೆ—ಆಡುಗಳಿಗೆ ಸ್ವಲ್ಪ ವಿಸ್ತೀರ್ಣವಾದ ಬಯಲು ಬೇಕು."

ಈ ವಿಚಾರವು ಬಂದ ಬಳಿಕ ಚಂದ್ರಿಕೆಯು ಮೊದಲಿನ ಚಂದ್ರಿಕೆಯಾಗಿ ಉಳಿಯಲಿಲ್ಲ. ಅದಕ್ಕೆ ಹಸಿರು ಹುಲ್ಲು ರುಚಿಸದಂತಾಯಿತು, ಇಲ್ಲಿಯ ನೀರು ಸವಿಯೆನಿಸದಾಯಿತು. ಅಬ್ಬೂಖಾನರ ಯಾವ ಮಾತೂ ಅದಕ್ಕೆ ಸರಿಹೋಗದಾಯಿತು. ಅದು ದಿನದಿನಕ್ಕೂ ಕೊರಗತೊಡಗಿತು, ದೇಹವು ದುರ್ಬಲವಾಗತೊಡಗಿತು. ಹಾಲೂ ಕಡಿಮೆಯಾಯಿತು. ಪ್ರತಿಕ್ಷಣವೂ ದೃಷ್ಟಿಯು ಬೆಟ್ಟದ ಕಡೆಗೇ ಇರುತ್ತಿದ್ದಿತು. ಹಗ್ಗವನ್ನು ಜಗ್ಗುತ್ತಿದ್ದಿತು, 'ಮೇ ಮೇ' ಎಂದು ಕೂಗುತ್ತಿದ್ದಿತು. ಏನೋ ಆಗಿದೆಯೆಂದು ಅಬ್ಬೂಖಾನರು ತಿಳಿದುಕೊಂಡರು, ಆದರೆ ಏನೆಂಬುದು ಅವರಿಗೆ ತಿಳಿಯದಾಯಿತು. ಒಂದು ದಿನ ಅಬ್ಬೂಖಾನರು ಹಾಲನ್ನು ಹಿಂಡಿಕೊಂಡ ನಂತರ ಅವರ ಕಡೆಗೆ ಮುಖ ತಿರುಗಿಸಿ ಆಡಿನ ಮಾತಿನಲ್ಲಿ ಹೇಳಿತು "ಅಬ್ಬೂಖಾನರೇ, ಇನ್ನು ನಾನು ನಿಮ್ಮ ಬಳಿಯಲ್ಲಿದ್ದರೆ ನನ್ನ ಸ್ವಾಸ್ಥ್ಯ ಚೆನ್ನಾಗಿ ಉಳಿಯಲಾರದು, ನನಗೆ

ದೊಡ್ಡ ರೋಗವಾಗುವುದು. ನನಗೆ ಇನ್ನು ಬೆಟ್ಟಕ್ಕೇ ಹೋಗಲು ಬಿಡಿ.''

ಅಬ್ಬೂಖಾನರಿಗೆ ಆಡುಗಳ ಮಾತು ತಿಳಿಯತೊಡಗಿದ್ದಿತು. ಅವರು ಗಟ್ಟಿಯಾಗಿ ನುಡಿದರು "ಯಾ ಅಲ್ಲಾ! ಇದೂ ಹೋಗಬೇಕೆನ್ನುತ್ತಿದೆ, ಇದೂ!'' ಕೈ ನಡುಗತೊಡಗಿದ್ದರಿಂದ ಕೈಯಲ್ಲಿನ ಹಾಲಿನ ಮಗಿಯು ಕೆಳಗೆ ಬಿದ್ದು ಒಡೆದು ಚೂರುಚೂರಾಗಿ ಹೋಯಿತು.

ಅಬ್ಬೂಖಾನರು ಆಡಿನ ಹತ್ತಿರ ಕುಳಿತು ವೇದನೆದುಂಬಿದ ಸ್ವರದಲ್ಲಿ ಕೇಳಿದರು—"ಮಗೂ ಚಂದ್ರಿಕೇ! ನೀನೂ ನನ್ನನ್ನು ಬಿಟ್ಟು ಹೋಗಬೇಕೆನ್ನುವಿಯೇನಮ್ಮಾ?''ಚಂದ್ರಿಕೆ ಉತ್ತರವಿತ್ತಳು "ಹೂ, ಹೋಗಬೇಕೆನ್ನುವೆ."

"ನಿನಗೆ ಮೇವು ದೊರೆಯುವುದಿಲ್ಲವೆ? ಈ ಕಾಳುಗಳು ನಿನಗೆ ಸೇರುವುದಿಲ್ಲವೆ? ಎಷ್ಟು ಬಗೆಯ ಕಾಳುಗಳನ್ನು ಬೆರಸಿ ತಂದಿದ್ದೇನೆ. ಇನ್ನೂ ತಂದುಕೊಡುವೆನಮ್ಮಾ."

"ಬೇಡ. ಕಾಳುಗಳಿಗಾಗಿ ಕಷ್ಟಪಡಬೇಡ.''

"ಹಾಗಾದರೆ ಕಟ್ಟುವ ಹಗ್ಗವು ಕಡಿಮೆ ಉದ್ದವಾಗಿದೆಯೇನು? ಇನ್ನಿಷ್ಟು ದೊಡ್ಡದನ್ನಾಗಿ ಮಾಡುವೆನು."

"ಇದರಿಂದೇನು ಪ್ರಯೋಜನ?''

"ಹಾಗಾದರೆ ನೀನು ಬಯಸುವುದಾದರೂ ಏನು?"

"ಏನನ್ನೂ ಇಲ್ಲ. ನನಗೆ ಬೆಟ್ಟಕ್ಕೆ ಹೋಗಗೊಡಿ."

"ಅಲ್ಲಿ ಯಾವ ಪ್ರಾಣಿಯಿದೆಯೆಂಬುದು ನಿನಗೆ ಗೊತ್ತಿದೆಯೇನು? ಅಲ್ಲಿ ತೋಳವಿದೆ. ಅದು ಬಂದರೇನು ಮಾಡುವಿ?"

"ದೇವರು ಎರಡು ಕೊಂಬುಗಳನ್ನು ದಯಪಾಲಿಸಿದ್ದಾನೆ. ಅವುಗಳಿಂದ ಇರಿದು ಅದನ್ನು ಕೊಲ್ಲುವೆನು."

"ಹೌದು. ಸರಿ! ನಿನ್ನ ಕೊಂಬುಗಳ ಪರಿಣಾಮ ಅದರ ಮೇಲಾಗುವುದೇನು! ಅದು ನನ್ನ ಅನೇಕ ಆಡುಗಳನ್ನು ತಿಂದುಬಿಟ್ಟಿದೆ. ಕಲ್ಲೂನ ಕೊಂಬುಗಳು ನಿನಗಿಂತಲೂ ದೊಡ್ಡ ವಾಗಿದ್ದುವು. ಅದನ್ನೂ ಅದು ಬಿಡಲಿಲ್ಲ. ಕಲ್ಲೂ ಇಡಿ ರಾತ್ರಿ ತೋಳದ ಕೂಡ ಕಾದಾಡಿತು, ಬೆಳಗು ಮುಂಜಾನೆ ತೋಳನ ಬಾಯಿಗೆ ಕೊನೆಗೆ ತುತ್ತಾಯಿತು."

"ಪಾಪ, ಬಡ ಕಲ್ಲೂ! ಅದೇನೇ ಇರಲಿ. ಆದರೆ ಅಬ್ಬೂಖಾನ ಮೀಯಾ, ನನಗೆ ಬೆಟ್ಟಕ್ಕೆ ಹೋಗಗೊಡಿ. ಏನು ಬೇಕಾದುದಾಗಲಿ. ನನಗೆ ಬೆಟ್ಟವು ಸೇರುತ್ತದೆ."

ಅಬ್ಬೂಖಾನರು ಸ್ವಲ್ಪ ಖಿನ್ನರಾದರು ಮತ್ತು ಸ್ವಲ್ಪ ಹೊತ್ತಿನ ನಂತರ ನುಡಿದರು "ಯಾ ಅಲ್ಲಾ! ಇದೂ ಹೋಗುವುದು! ನನ್ನ ಇದೂ ಒಂದು ಆಡು ಆ ತೋಳನ ಹೊಟ್ಟೆಗೆ ಹೋಗುವುದು. ಇಲ್ಲ. ನಾನು ಇದನ್ನು ಉಳಿಸುವೆನು. ನೀನು ಬಯಸಿದರೂ ನಾನು ನಿನ್ನನ್ನು ಹೋಗಗೊಡೆನು, ಉಳಿಸುವೆನು. ಈಗ ನಿನ್ನ ಬಯಕೆ ನನಗೆ ತಿಳಿಯಿತು. ನಡೆ, ಇನ್ನು ನಿನ್ನನ್ನು ಕೋಣೆಯಲ್ಲಿ ಕಟ್ಟುವೆನು. ಇಲ್ಲದೆ ಹೋದರೆ ನೀನು ಮೋಸಮಾಡಿ ಓಡಿ ಹೋಗುವಿ."

ಅಬ್ಬೂಖಾನರು ಚಂದ್ರಿಕೆಯನ್ನು ಒಂದು ಕೋಣೆಯಲ್ಲಿ ಕಟ್ಟಿ ಬಾಗಿಲ ಹಾಕಿ ಚಿಲಕ ಹಾಕಿದರು. ಆದರೆ ಕಿಡಿಕಿಯನ್ನು ಮುಚ್ಚಲು ಮರೆತರು. ಚಂದ್ರಿಕೆಯು ಹಗ್ಗ ಹರಿದುಕೊಂಡು ಕಿಡಿಕಿಯಿಂದ ಜಿಗಿದು ಹೊರಬಿದ್ದಿತು!

ಚಂದ್ರಿಕೆ ಬೆಟ್ಟಕ್ಕೆ ಹೋಯಿತು. ಅದಕ್ಕೆ ಅತ್ಯಂತ ಆನಂದವಾಯಿತು. ಇಡಿ ಬದುಕಿನಲ್ಲಿ ಅನುಭವಿಸದ ಆನಂದವನ್ನು

ಪಡೆಯಿತು. ಆನಂದದ ಎಲ್ಲೆ ಮೀರಿತು. ಈ ದಿನ ಅದರ ಬಣ್ಣವೇ ಬದಲಾಯಿತು. ಬೆಟ್ಟದ ವಸ್ತುಗಳೆಲ್ಲವೂ "ನಮ್ಮಲ್ಲಿ ನೀನು ಬಂದು ಕೂಡಿದುದಕ್ಕಾಗಿ ನಿನಗೆ ಧನ್ಯವಾದಗಳು" ಎಂದು ಹೇಳತೊಡಗಿದುವು. ಅತ್ತ ಇತ್ತ ಸೇವಂತಿಗೆಗಳು ಕುಲುಕುಲು ನಗುತಿದ್ದುವು, ಎತ್ತರವಾಗಿ ಬೆಳೆದ ಹುಲ್ಲಿನ ದೇಟುಗಳು ಅವನ್ನು ಅಪ್ಪುತ್ತಿದ್ದುವು. ಇಡಿ ಬೆಟ್ಟವು ಸಂತೋಷದಿಂದ ನಗುತ್ತಿರುವುದೇನೋ ಎಂಬಂತೆ ತೋರುತ್ತಿತ್ತು. ತನ್ನ ಆಗಲಿದ ಮಗಳು ಪುನಃ ಬಂದು ಭೆಟ್ಟಿಯಾದಳೊ ಏನೊ ಎಂಬಂತೆ ಆ ಬೆಟ್ಟಕ್ಕೆ ಎನಿಸುತ್ತಿದ್ದಿತು. ಚಂದ್ರಿಕೆಗೆ ಅದೆಷ್ಟು ಸಂತೋಷವಾಯಿತೆಂಬುದನ್ನು ಯಾರು ತಮ್ಮ ಅನಿರ್ವಚನೀಯ ಶೈಲಿಯಲ್ಲಿ ವರ್ಣಿಸಬಲ್ಲರು? ಮುಳ್ಳುಬೇಲಿಯಿಲ್ಲ, ಹಗ್ಗವಿಲ್ಲ, ಗೂಟವಿಲ್ಲ! ಹುಲ್ಲು ಇಲ್ಲ, ಕಾಳು ಇಲ್ಲ! ಬೆಟ್ಟದ ಆ ಸೊಪ್ಪು, ಆ ವನಸ್ಪತಿಗಳ ಮುಂದೆ ಅಬ್ಬಾಖಾನರ ಹುಲ್ಲು ಕಾಳು ತುಚ್ಛ!!

ಚಂದ್ರಿಕೆಯು ಅತ್ತೊಮ್ಮೆ ಇತ್ತೊಮ್ಮೆ ಜಿಗಿಯುತ್ತಿದ್ದಿತು. ಇಲ್ಲಿಂದ ಜಿಗಿದು ಅಲ್ಲಿಗೆ ಹೋಯಿತು—ಬಂಡೆಗಲ್ಲ ಮೇಲೊಮ್ಮೆ ತಗ್ಗಿಗೊಮ್ಮೆ. ಇಲ್ಲಿ ಸ್ವಲ್ಪ ಜಾರಿತು, ಸಂಬಾಳಿಸಿಕೊಂಡು ಮತ್ತೆ ಜಿಗಿಯಿತು. ಈ ಒಂದು ಚಂದ್ರಿಕೆಯ ಬರವಿನಿಂದ ಇಡಿ ಬೆಟ್ಟಕ್ಕೆ ಶೋಭೆ ಬಂದಿತು, ಬೆಳಕು ಬಂದಿತು. ಈ ಸ್ವಚ್ಛಂದ, ಸ್ವತಂತ್ರವಾದ ವಾತಾವರಣಕ್ಕೆ ಅಬ್ಬಾಖಾನರ ಅನೇಕ ಆಡುಗಳು ಬಂದಿವೆ.

ಸ್ವಲ್ಪ ಹುಲ್ಲನ್ನು ಜಗಿದು ಮುಖವನ್ನು ಮೇಲಕ್ಕೆತ್ತಿದಾಗ ಚಂದ್ರಿಕೆಗೆ ಅಬ್ಬಾಖಾನರ ಚಿಕ್ಕಮನೆ, ಅಂಗಳ, ಆ ಮುಳ್ಳು-

ಬೇಲಿಯಿಂದ ಸುತ್ತುಗಟ್ಟಲ್ಪಟ್ಟ ಹೊಲ ಗೋಚರಿಸಿದುವು. ಅವುಗಳನ್ನು ನೋಡಿ ನಕ್ಕಿತು, ಮತ್ತು ಮನದಲ್ಲಿ ಎಂದಿತು. "ಅಯ್ಯೋ ದೇವರೆ, ಎಷ್ಟು ಚಿಕ್ಕಮನೆ ಅದು! ನಾನು ಇಷ್ಟು ದಿನ ಅದರಲ್ಲಿ ಅದು ಹೇಗೆ ಇದ್ದೆನು! ನಾನದರಲ್ಲಿ ಹಿಡಿಸುತ್ತಿದ್ದುದಾದರೂ ಹೇಗೆ!" ಬೆಟ್ಟದ ತುಟ್ಟ ತುದಿಯ ಮೇಲಿಂದ ಅದಕ್ಕೆ ಈ ಜಗತ್ತು ಎಲ್ಲವೂ ಎಳ್ಳುಕಾಳಷ್ಟಾಗಿ ಕಾಣಿಸುತ್ತಿದ್ದಿತು.

ಚಂದ್ರಿಕೆಗೆ ಈ ದಿನವು ಬಹು ಆನಂದದಾಯಕವಾಗಿದ್ದಿತು. ಸೂರ್ಯನು ನಡುಬಾನಿಗೆ ಬರುವ ವರೆಗೆ ಹಾರಾಡಿತು, ಜಿಗಿಯಿತು. ತನ್ನ ಜೀವಮಾನದಲ್ಲಿ ಈ ದಿನ ಕುಣಿದಾಡಿದಷ್ಟು ಎಂದೂ ಕುಣಿದಿರಲಿಲ್ಲ. ಇಳಿಪೊತ್ತಿಗೆ ಬೆಟ್ಟದಾಡುಗಳ ಒಂದು ಗುಂಪು ಅದಕ್ಕೆ ಕಾಣಿಸಿತು. ಆ ಗುಂಪಿನ ಆಡುಗಳು ಇದನ್ನು ಆನಂದದಿಂದ ಹತ್ತಿರ ಕರೆದು ಎಲ್ಲ ಸಮಾಚಾರವನ್ನು ಕೇಳಿದುವು. ಆ ಗುಂಪಿನಲ್ಲಿ ಹರೆಯದ ಹೋತುಗಳೂ ಇದ್ದುವು. ಅವೂ ಚಂದ್ರಿಕೆಯನ್ನು ಆತ್ಯಾದರದಿಂದ ಕಂಡುವು. ಅದರಲ್ಲಿ ಒಂದು ಬಿಳಿ ಚಿಕ್ಕೆಯ ಕರಿಯ ಹೋತು ಇದ್ದಿತು. ಅದು ಚಂದ್ರಿಕೆಗೆ ಸುಂದರವಾಗಿ ಕಂಡಿತು. ಎರಡೂ ಬಹಳ ಹೊತ್ತಿನ ವರೆಗೆ ಅತ್ತ ಇತ್ತ ಜೊತೆಯಾಗಿ ಅಲೆದಾಡಿದುವು. ಅವು ಏನೇನು ಮಾತನಾಡಿಕೊಂಡುವೊ ಏನೊ. ಅವುಗಳು ಮಾತನಾಡುವ ಜಾಗೆಯಲ್ಲಿ ಒಂದು ಬುಗ್ಗೆಯಿದ್ದಿತು. ಅದೊಂದು ಅವುಗಳ ಮಾತನ್ನು ಕೇಳಿರಬಹುದು. ಆ ಬುಗ್ಗೆಯನ್ನು ಕೇಳಿದರೆ ಗೊತ್ತಾಗಬಹುದು, ಆದರೆ ಬಹುಶಃ ಅದೂ ಹೇಳಲಿಕ್ಕಿಲ್ಲ!

ಆ ಬೆಟ್ಟದಾಡುಗಳ ಗುಂಪು ಅಲೆಯುತ್ತ ಎತ್ತೋ ಹೋಯಿತು. ಹೋತೂ ಸ್ವಲ್ಪ ಹೊತ್ತಿನ ಮೇಲೆ ಅಲೆಯುತ್ತ ಹೋಗಿ ತನ್ನ ಗುಂಪನ್ನು ಸೇರಿಕೊಂಡಿತು.

ಚಂದ್ರಿಕೆಗೆ ಇನ್ನೂ ಸ್ವಾತಂತ್ರ್ಯದ ಹಸಿವು ಹಿಂಗಿರಲಿಲ್ಲ. ಆ ಗುಂಪಿನ ಕೂಡ ಇರುವುದೂ ಗುಂಪಿನ ನಿಯಮಗಳಿಗೆ ಒಳಪಡುವುದೂ ಅದಕ್ಕೆ ಬೇಡವಾಗಿದ್ದಿತು. ಆದ್ದರಿಂದ ಅದು ಒಂದು ಕಡೆಗೆ ಹೋಯಿತು. ಸಾಯಂಕಾಲವಾಯಿತು. ತಂಗಾಳಿಯು ಬೀಸತೊಡಗಿತು. ಇಡಿಯ ಬೆಟ್ಟದ ಸೀಮೆಯು ಹೊಂಬಣ್ಣದುದಾಯಿತು. ಚಂದ್ರಿಕೆಗೆ 'ಸಾಯಂಕಾಲವಾಯಿತೇ ಇಷ್ಟು ಬೇಗ ?' ಎಂದು ಎನಿಸಿತು.

ಬೆಟ್ಟದ ಅಡಿಯಲ್ಲಿದ್ದ ಅಬ್ಬೂಖಾನರ ಮನೆಯೂ ಹೊಲವೂ ಮಬ್ಬುಗತ್ತಲಲ್ಲಿ ಕಾಣದಾದುವು. ಒಬ್ಬ ಕುರಿಕಾರ ತನ್ನ ಕುರಿಹಿಂಡನ್ನು ಮನೆಗೆ ಹೊಡೆದುಕೊಂಡು ಹೋಗುತ್ತಿದ್ದನು. ಅವುಗಳ ಕೊರಳ ಗಂಟೆಯ ಶಬ್ದವು ಕೇಳುತ್ತಿದ್ದಿತು. ಸ್ವಲ್ಪ ಹೊತ್ತು ಚಂದ್ರಿಕೆಯು ಉದಾಸವಾಯಿತು. ಕತ್ತಲು ಪಸರಿಸುತ್ತಲಿದ್ದಿತು, ಬೆಟ್ಟದಲ್ಲಿ ಒಂದುಕಡೆಯಿಂದ ಖೂ ! ಖೂ ! ಎಂಬ ದನಿಯೂ ಕೇಳಬರುತ್ತಲಿದ್ದಿತು.

ಈ ದನಿಯನ್ನು ಕೇಳಿ ಚಂದ್ರಿಕೆಯು ಕೊಂಚ ಗಾಬರಿಗೊಂಡಿತು. ಏಕೆಂದರೆ ಇಷ್ಟೊತ್ತಿನ ವರೆಗೂ ಅವಕ್ಕೆ ತೋಳದ ನೆನಹು ಬಂದಿರಲಿಲ್ಲ, ಈಗ ಬಂದಿತು. ಬೆಟ್ಟದ ಕೆಳಗಿನಿಂದ ಸೀಟಿಯ ಮತ್ತು ಬ್ಯಾಗಲ್ಲಿನ ದನಿಯೂ ಕೇಳಿಸಿತು. ಪಾಪ, ಅಬ್ಬೂಖಾನರು ಸೀಟಿ ಹಾಕುತ್ತಿದ್ದರು, ಈ ದನಿಯಾದರೂ ಕೇಳಿ ಚಂದ್ರಿಕೆಯು ಹಿಂದಿರುಗಿ ಬರಲೆಂದು. "ತಿರುಗಿ ಬಾ, ತಿರುಗಿ ಬಾ" ಎಂದು ಇತ್ತಿಂದ ಅಬ್ಬೂಖಾನರ

ದನಿ; ಅತ್ತಿಂದ " ಇತ್ತ ಬಾ, ಇತ್ತ ಬಾ " ಎನ್ನುವ ತೋಳನ ದನಿ.

ಹಿಂತಿರುಗಿ ಹೋಗಬೇಕೆಂದು ಒಂದು ಬಾರಿ ಚಂದ್ರಿಕೆಯ ಮನದಲ್ಲಿ ಬಂದಿತು. ಆದರೆ ಹಗ್ಗ, ಗೂಟದ ನೆನಹು ಬರುತ್ತಲೆ ಅದು ಮಾಯವಾಯಿತು. ಅಲ್ಲಿ ಬದುಕಿರುವುದಕ್ಕಿಂತ ಇಲ್ಲಿ ಸಾಯುವುದು ಮೇಲೆಂದು ಅದಕ್ಕೆನಿಸಿತು. ಕೊನೆಗೆ ಸೀಟಿಯ ಮತ್ತು ಬ್ಯೂಗಲ್ಲಿನ ದನಿಯು ನಿಂತಿತು. ಹಿಂದೆ ಎಲೆಗಳಲ್ಲಿ ಸಪ್ಪಳಾಗುತ್ತಿರುವುದು ಕೇಳಿಸಿತು. ಚಂದ್ರಿಕೆಯು ತಿರುಗಿ ನೋಡಿತು. ಎರಡು ಕಿವಿಗಳು ಕಂಡುವು. ಎರಡು ಕತ್ತಲಲ್ಲಿ ಮಿಂಚುವ ಕಣ್ಣುಗಳೂ ಕಾಣಿಸಿದುವು. ತೋಳವು ಹತ್ತಿರ ಬಂದುಬಿಟ್ಟಿದ್ದಿತು.

ತೋಳವು ಆಡಿನ ಮೇಲೆ ಕಣ್ಣಿಟ್ಟು ಹೊಂಚುಹಾಕಿ ಕುಳಿತಿದ್ದಿತು. ಈ ಚಂದ್ರಿಕೆ ತನ್ನ ಕೈಯಿಂದ ಪಾರಾಗಿ ಹೋಗದೆಂಬ ನಂಬಿಕೆ ಅದಕ್ಕಿದ್ದಿತು. ಆಡು ಅತ್ತ ಹೊರಳಿತು. ತೋಳವು " ಓಹೊ ! ಅಬ್ಬೂಖಾನರ ಆಡು. ತಿನಿಸಿ ಚೆನ್ನಾಗಿ ಪುಷ್ಟವಮಾಡಿದ್ದಾರೆ. " ಎಂದು ತನ್ನ ಕೆಂಪುಕೆಂಪಾದ ನಾಲಿಗೆಯನ್ನು ನೀಲವರ್ಣದ ತುಟಿಗಳ ಮೇಲೆ ಆಡಿಸಿತು. ಅಬ್ಬೂಖಾನರು ಹೇಳಿದ ಕಲ್ಲೂನ ಕತೆಯು ಚಂದ್ರಿಕೆಯ ನೆನಪಿಗೆ ಬಂದಿತು. ಬೆಳಗಿನ ವರೆಗೆ ತೋಳನ ಕೂಡ ಕಾದಾಡಿ ಬೆಳಗ್ಗೆ ಪ್ರಾಣದಾನ ಮಾಡುವುದಕ್ಕಿಂತ ಈಗಲೇ ಏಕೆ ಮಾಡಿಬಿಡಬಾರದು ? ಎಂದು ಒಮ್ಮೆ ವಿಚಾರವು ಚಂದ್ರಿಕೆಗೆ ಬಂದಿತು. ಬಳಿಕ ಇದು ತರವಲ್ಲವೆಂದೆನಿಸಿತು. ತನ್ನ ತಲೆಯನ್ನು ಬಾಗಿಸಿ ಕೊಂಬುಗಳನ್ನು ಮುಂದೆ ಮಾಡಿಕೊಂಡು ತೋಳದೊಡನೆ ಕಾಳಗ ಹೂಡಿತು ಶೂರರ ಸ್ವಭಾವವೇ ಇದು ಎಂದು ತೋರಿ

ಸಲು ! ಚಂದ್ರಿಕೆಯು ಹೇಡಿಯೆಂದು ಯಾರೂ ತಿಳಿಯ ಕೂಡದು ಎಂಬುದನ್ನು ತೋರಿಸಲು ! ತೋಳದ ಶಕ್ತಿ ಎಷ್ಟೆಂಬುದು ಅದಕ್ಕೆ ಗೊತ್ತಿರಲಿಲ್ಲ. ಆದರೆ ತೋಳನನ್ನು ಆಡುಗಳು ಕೊಲ್ಲಲಾರವೆಂಬುದು ಮಾತ್ರ ಗೊತ್ತಿದ್ದಿತು. ತನ್ನ ಜಾತಿಗೆ ಕಲಂಕ ಬರಬಾರದೆಂದು ಅದು ತೋಳದ ಕೂಡ ಕಾಳಗ ಹೂಡಲು ಬಯಸಿತು. ಸೋಲು-ಗೆಲುವು ನಮ್ಮ ಕೈಯೊಳಗಿನದಲ್ಲ. ಅದು ದೇವರ ಕೈಯಲ್ಲಿನ ಮಾತು. ಕಾಳಗವು ಅವಶ್ಯವಾಗಿದೆ. ಕಲ್ಲೂನಂತೆ ಇಡೀ ರಾತ್ರಿ ತೋಳನನ್ನು ಎದುರಿಸುವೆನೊ ಇಲ್ಲವೊ ಎಂಬುದನ್ನು ಯೋಚಿಸುತ್ತಿದ್ದಿತು.

ಸ್ವಲ್ಪ ಹೊತ್ತು ಕಳೆದನಂತರ ತೋಳವು ಮುಂದುವರಿಯಿತು. ಚಂದ್ರಿಕೆಯು ಕೊಂಬುಗಳನ್ನು ಮುಂದೆ ಮಾಡಿತು. ಅದು ಹೇಗೆ ಮೇಲೇರಿ ಹೋಗಿ ಏಟು ಕೊಡುತ್ತಿತ್ತೆಂಬುದು ತೋಳವನ್ನೇ ಕೇಳಿ ತಿಳಿದುಕೊಳ್ಳಬೇಕು. ಕೊಂಬಿನ ಇರಿತಗಳು ಕೂರಂಬುಗಳಂತಿರುತ್ತಿದ್ದುವು. ಎಷ್ಟೋ ಬಾರಿ ತೋಳನನ್ನು ಹಿಂದಕ್ಕಟ್ಟಿತು. ಇದೇ ರೀತಿಯಾಗಿ ಬಹಳ ರಾತ್ರಿಯು ಕಳೆದುಹೋಯಿತು. ಒಮ್ಮೊಮ್ಮೆ ಚಂದ್ರಿಕೆಯು ಆಕಾಶವನ್ನು ನೋಡುತ್ತಿದ್ದಿತು. ನಕ್ಷತ್ರಗಳಿಗೆ ಕಣ್ಣುಸನ್ನೆಯಿಂದ ಹೇಳುತ್ತಿದ್ದಿತು—ಹೀಗೆ ಎಲ್ಲಾದರೂ ಬೆಳಕಾದೀತು !

ನಕ್ಷತ್ರಗಳು ಒಂದೊಂದಾಗಿ ಕಾಣದಾದುವು. ಚಂದ್ರಿಕೆಯು ಕೊನೆಗೆ ತನ್ನ ಬಲವನ್ನು ಇಮ್ಮಡಿ ಮಾಡಿತು. ತೋಳಕ್ಕೂ ಬೇಸರ ಬಂದಿದ್ದಿತು. ದೂರದಿಂದ ಸ್ವಲ್ಪ ಬೆಳಕು ಕಂಡಂತಾಯಿತು. ಕೋಳಿಯ ಕೂಗೂ ಕೇಳಿಸಿತು. ದೂರದಿಂದ ಮಸೀದೆಗಳೊಳಗಿಂದ ಪ್ರಾರ್ಥನೆಯ ದನಿಯೂ ಕೇಳಿ

ಬಂದಿತು. ಚಂದ್ರಿಕೆಯು ಮನದಲ್ಲಿ ಎಂದಿತು "ಪರಮಾತ್ಮಾ, ಎಲ್ಲವೂ ನಿನ್ನದೆ. ನಿನಗೆ ಅನೇಕ ವಂದನೆಗಳು. ನಾನು, ನನ್ನ ಶಕ್ತಿಗನುಸಾರವಾಗಿ ಕಾಳಗ ಮಾಡಿದೆನು. ಇನ್ನು ನಿನ್ನ ಮನಸ್ಸು! 'ಅಲ್ಲಾಹೋಅಕಬರ' ಎಂಬ ಪ್ರಾರ್ಥನೆಯ ಸೊಲ್ಲು ಕೇಳಿ ಬರುತ್ತಿರುವಾಗ ಚಂದ್ರಿಕೆಯು ಭೂಮಿಗೆ ಬಿದ್ದಿತು. ಬೆಳ್ಳಗಿನ ಮೈ ಹೊದಿಕೆಯು ರಕ್ತದಿಂದ ರಂಜಿತವಾಗಿದ್ದಿತು. ತೋಳವು ಅದನ್ನು ಕೊಂದು ತಿಂದುಹೋಯಿತು. ಮರದ ಮೇಲೆ ಹಕ್ಕಿಗಳು ಕುಳಿತುಕೊಂಡು ನೋಡುತ್ತಿದ್ದುವು. ಅವುಗಳಲ್ಲಿ 'ಗೆದ್ದವರು ಯಾರು?' ಎಂಬುದನ್ನು ಕುರಿತು ಚರ್ಚೆ ನಡೆದಿದ್ದಿತು. ಬಹಳ ಹಕ್ಕಿಗಳು ಎಂದುವು ತೋಳಗೆದ್ದಿತೆಂದು. ಒಂದು ಮುದಿ ಹಕ್ಕಿಯು ಎಂದಿತು "ಚಂದ್ರಿಕೆ ಗೆದ್ದಿತು!" ಎಂದು.

# ಮಸಣ

[ ಶ್ರೀ. ಅಖ್ತರ ಹುಸೇನ ರಾಯಪುರಿ ಅವರು ತರುಣ ಉರ್ದೂ ಕತೆಗಾರರು. ಉರ್ದೂ ಕಥಾಕ್ಷೇತ್ರದಲ್ಲಿ ಉಚ್ಚವಾದ ಸ್ಥಾನವನ್ನು ಸಂಪಾದಿಸಿದವರು. ಪ್ರಗತಿಪರ ವಿಷಯಗಳನ್ನು ಕುರಿತು ಕತೆಗಳನ್ನು ಬರೆಯುವರು—ಎಂದರೆ ಬದುಕು ಸಾವುಗಳ ನಡುವಣ ಕಾಳಗವನ್ನು ಕುರಿತು. ಇಂದಿನ ಸಮಾಜಕ್ಕೆ ಇಂತಹ ಕತೆಗಳೇ ಹೆಚ್ಚಾಗಿ ಸೇರುತ್ತವೆ. ಇವರ ಕತೆಗಳಲ್ಲಿ ವಿಲಕ್ಷಣವಾದ ಬಲವಿದೆ, ಅದು ನಮ್ಮನ್ನು ಕೊಂಚಕಾಲ ಅಲ್ಲಾಡಿಸಿಬಿಡುತ್ತದೆ. ಕತೆಗೆ ತಕ್ಕ ಪಾತ್ರಗಳೂ ಭಾಷೆಯೂ ಇರುವುದರಿಂದ ಕತೆಗಳು ಪರಿಣಾಮಕಾರಿಯಾಗಿರುತ್ತವೆ.

'ಮಸಣ'ವೆಂಬ ಈ ಕತೆಯಲ್ಲಿ ಮೇಲ್ಕಾಣಿಸಿದ ಎಲ್ಲ ಗುಣಗಳೂ ಇವೆ. ಇದನ್ನು ಓದಿ ಯಾರು ಕ್ಷಣಮಾತ್ರವಾದರೂ ಭಯಭೀತರಾಗದೆ ಉಳಿಯುವರು? ಎಷ್ಟು ನಿಜವಾದ ಚಿತ್ರ! ಎಷ್ಟು ಕಟು! ನಮ್ಮ ಹೃದಯಕ್ಕೆ ಏಟುಕೊಡುವ ಇಂತಹ ಕತೆಗಳು ಬೇಕಾಗಿವೆ—ನಮ್ಮನ್ನು ಎಚ್ಚರಿಸಲಿಕ್ಕೆ. ]

ಮಸಣ ನದಿಯ ತೀರದಲ್ಲಿದ್ದಿತು. ಚಿಕ್ಕ ಮೈದಾನ. ಅಲ್ಲೇನೂ ಬೆಳೆಯುತ್ತಿರಲಿಲ್ಲ. ಮಣ್ಣು ಮಸಿಯಂತಿದ್ದಿತು—ಮಂಜುಗಟ್ಟಿದ ನೆತ್ತರದಂತೆ!

ನದಿಯ ತೀರದಲ್ಲಿದ್ದ ಮರಗಳು ತಮ್ಮ ಎಲೆಗಳನ್ನು ಕಳೆದುಕೊಂಡಿದ್ದುವು. ಬರಗಾಲದಿಂದ ಬಳಲಿದ ಮನುಷ್ಯರಂತೆ ಅವುಗಳ ಶಾಖೆಗಳು ಸದಾ ಮುಗಿಲ ಕಡೆಗೆ ನೋಡುತ್ತಿದ್ದುವು.

ಹದ್ದು ಕಾಗೆಯ ವಿನಾ ಮತ್ತಾವ ಹಕ್ಕಿಯೂ ಇವುಗಳ ಮೇಲೆ ಕುಳ್ಳಿರುತ್ತಿರಲಿಲ್ಲ. ದೂರದವರೆಗೆ ಎಲುಬಿನ ಚೂರುಗಳು ಹರಡಿದ್ದುವು. ಅತ್ತಿತ್ತ ಬಿದ್ದ ಒಂದೆರಡು ತಲೆಬುರುಡೆಗಳು ಬದುಕನ್ನು ನೋಡಿ ನಗೆಯಾಡುತ್ತಿರುವಂತೆ ಬಿದ್ದಿದ್ದುವು. ನದಿಯಲ್ಲಿ ನೀರು ಬಹಳವಾಗಿರಲಿಲ್ಲ; ಇದ್ದಷ್ಟು ನಿಧಾನವಾಗಿ ಹರಿಯುತ್ತಿದ್ದಿತು. ಬಂಡೆಗೆ, ನದಿಯ ದಡಕ್ಕೆ ಅಪ್ಪಳಿಸಿದಾಗ ತಲೆಯನ್ನು ಮೇಲಕ್ಕೆತ್ತುತ್ತಿದ್ದಿತು; ಮಸಣದ ಔದಾಸೀನ್ಯವನ್ನು ನೋಡಿ ತಲೆತಗ್ಗಿಸಿಕೊಂಡು ಮುಂದೆ ಸಾಗುತ್ತಿದ್ದಿತು.

ಅಲ್ಲಿಗೆ ಆ ದಿನ ಸಾಯಂಕಾಲ ನಗರದವರು ಒಂದು ಹೆಣ ತಂದಿದ್ದರು. ಹೆಣವನ್ನು ಚಿತೆಯ ಮೇಲಿಟ್ಟರು. ಒಬ್ಬ ಮುದುಕನು ತುಪ್ಪವನ್ನು ಸುರುವಿದನು, ಒರ್ವ ಅಲ್ಪ ವಯಸ್ಸಿನವನು ಬೆಂಕಿಯಿಟ್ಟನು. ಚಿತೆಯು ಒಬ್ಬ ಬಡವನ ಗುಡಿಸಲು ಸುಟ್ಟು ಉರಿವಂತೆ ಧಗಧಗ ಉರಿಯತೊಡಗಿತು.

ಗಂಡುಸರು ಒಂದು ಕಡೆಯಲ್ಲಿ ಉದಾಸರಾಗಿ ಕುಳಿತಿದ್ದರು, ಇನ್ನೊಂದು ಕಡೆಯಲ್ಲಿ ಹೆಂಗುಸರು ಕೂದಲುಗಳನ್ನು ಹರವಿಕೊಂಡು ಅಳುತ್ತಿದ್ದರು.

ಚಿತೆಯು ಪ್ರಜ್ವಲಿಸಿತು. ಗಂಡುಸರಿಬ್ಬರು ಕೈಯಲ್ಲಿ ಉದ್ದವಾದ ಗಳಗಳನ್ನು ತೆಗೆದುಕೊಂಡು ಹೆಣವನ್ನು ಅತ್ತಿಂದ ಇತ್ತ ಇತ್ತಿಂದ ಅತ್ತ ತುರುಕುತ್ತಿದ್ದರು, ಅದು ಚನ್ನಾಗಿ ಸುಟ್ಟು ಭಸ್ಮವಾಗಬೇಕೆಂದು. ಮಾಂಸದ ಕರಣೆಗಳು ಸುಟ್ಟು ಹಾರಿ ಹಾರಿ ಬೀಳುತ್ತಿದ್ದುವು. ಜ್ವಾಲೆಯು ನಾಯಿಯಂತೆ ಎಲಬುಗಳನ್ನು ದವಡೆಯಲ್ಲಿಟ್ಟುಕೊಂಡು ಕಡಿಯುತ್ತಿದ್ದಿತು ಮತ್ತು ಕಾಣದ ಕಣ್ಣುಗಳಿಂದ ನಾಲ್ಕೂ ಕಡೆಗೆ ನೋಡುತ್ತಿದ್ದಿತು.... !

ಸಾಯಂಕಾಲವು ಸಮೀಪಿಸತೊಡಗಿದ್ದಿತು. ಮೋಡಗಳು ಅತ್ತಿತ್ತ ಓಡಾಡುತ್ತಿದ್ದುವು. ಕತ್ತಲು ಮುಸುಕಿದ ಆಕಾಶ ದಲ್ಲಿ ತಾರೆಗಳು ಮಿನುಗುತ್ತಿದ್ದುವು. ಸುತ್ತಲೂ ಮೌನ— ಸ್ಮಶಾನ ಮೌನ. ಎಲುಬುಗಳು ಚಿತೆಯಲ್ಲಿ ಸಿಡಿಮಿಡಿಗುಟ್ಟು ತ್ತಿದ್ದುವು. ಈ ಸದ್ದಿನ ವಿನಾ ಮತ್ತಾವ ಸದ್ದೂ ಇರಲಿಲ್ಲ.

ಅಜಬೀ ಲೋಹಾರನು ತನ್ನ ದೋತರದ ಚುಂಗಿನಿಂದ ಚಿಲಿಮೆಯನ್ನು ಹೊರಗೆ ತೆಗೆದು ಚಿತೆಯಿಂದ ಒಂದು ಕಿಡಿ ಯನ್ನು ತೆಗೆದುಕೊಂಡು ಹೊತ್ತಿಸಿದನು. ತನ್ನ ಕೂಡ ಮಾತನಾಡಲು ಆತುರನಾಗಿರುವ ಒಬ್ಬ ವ್ಯಕ್ತಿಯನ್ನು ಹೆಣ ವನ್ನು ಮಸಣಕ್ಕೆ ತಂದವರಲ್ಲಿ ಹುಡುಕುತ್ತಿದ್ದನು. ಆದರೆ ವಾತಾವರಣವು ಅನುಕೂಲವಿರಲಿಲ್ಲ. ಬಂದ ಮಂಡಲಿಗೆ ಮಾತು ದುಃಖದಲ್ಲಿ ಬೇಕಾಗಿರಲಿಲ್ಲ.

ಅಜಬೀ ಲೋಹಾರನು ಒಂದೆರಡು ಜುರಿಯನ್ನು ಎಳೆ ದನು, ಕಿಡಿಗಳು ಚಿಲಿಮೆಯಿಂದ ಹಾರಿದುವು. ಬಳಿಕ ಅವನು ಒಬ್ಬ ಅಜ್ಞಾತವ್ಯಕ್ತಿಯನ್ನು ಸಂಬೋಧಿಸಿ ಎನ್ನತೊಡಗಿದನು —“ಹರಿಯೊಂದು ಹೇಳು! ರಾಮನೇ ಬಲ್ಲ, ಗುಂಡು ಎದೆ ಯನ್ನೇ ಹೊಕ್ಕಿತು. ನಾನು ಹತ್ತಿರದ ಕಾಲುವೆಯಲ್ಲಿ ಅಡಗಿ ಕೊಂಡು ಎಲ್ಲವನ್ನೂ ನೋಡುತ್ತಿದ್ದೆ. ಅವನು ನಿಶಾನೆಯನ್ನು ಹಿಡಿದುಕೊಂಡು ಮುಂದೆ ಮುಂದೆ ಬರುತ್ತಿದ್ದ. ಮೆರವಣಿ ಗೆಯು ಮುಂದುವರಿದಾಗ ಪೋಲೀಸರು—ಕುದುರೆ ಸ್ವಾರರು— ದಾರಿಯನ್ನು ಅಡ್ಡಗಟ್ಟಿ ಅದನ್ನು ತಡೆಯಲು ಬಂದರು. ಕಪ್ತಾ ನನು ಎಂದನು ‘ಮುಂದಕ್ಕೆ ಹೋಗಕೂಡದು’. ಏನು ಹೇಳಲಿ ಅಣ್ಣಾ, ಆ ಹುಡುಗರ ಎದೆಗಾರಿಕೆ, ಅವರೆಂದರು ‘ನಾವು ಮುಂದಕ್ಕೇ ಹೋಗುವೆವು. ದಾರಿ ಬಿಡಿರಿ ! ’ಎಂದು.

ಫೋಟೊ ನಡುವೆ ಬಾಯಿಹಾಕಿ ಎಂದ "ಏನೆನ್ನುವಿರಿ ? ನಮಗೆ ಮಾತಾಡಲು ಅವಕಾಶವೆಲ್ಲಿತ್ತು ? ಪೋಲೀಸರು ಬಿರುಗಾಳಿಯಂತೆ ನಮ್ಮ ಮೇಲೇರಿ ಬಂದರು. ಓಡಿಹೋಗಲೂ ಸಮಯವಿರಲಿಲ್ಲ. ಕೆಲವರು ಓಡಿಹೋಗಲಾರಂಭಿಸಿದರು, ಕೆಲವರು ಬಿದ್ದರು, ಕುದುರೆಯ ಕಾಲುಗಳಿಗೆ ಸಿಕ್ಕರು. ಕಾಲುವೆಯಲ್ಲಿ, ರಸ್ತೆಯ ಮೇಲೆ ಮುಕ್ಕರಿಸಿ ಬಿದ್ದರು. ಲಾಠಿ ಏಟುಗಳಿಂದ ಹೊಡೆತ ತಿಂದವರ ಮಾತೇ ಬೇರೆ."

ಅಜಬೀ ಲೋಹಾರನೆಂದ "ಹೌದು, ಅದೇ ಸರಿ.... ಏನೇ ಇರಲಿ, ಅವನು ಇದ್ದ ವೀರ! ನಿಶಾನೆಯನ್ನು ಹಿಡಿದುಕೊಂಡು ತನ್ನ ಸ್ಥಾನದ ಮೇಲೆ ನಿಂತವನು ಕದಲಲೇ ಇಲ್ಲ. ಇಷ್ಟರಲ್ಲಿ ಎಲ್ಲಿಂದಲೋ ಕಲ್ಲುಗಳ ಮಳೆ ಸುರಿಯತೊಡಗಿತು. ಒಂದು ಕಡೆಯಿಂದ ಬಂದೂಕಿನ ಗುಂಡುಗಳು ಹಾರತೊಡಗಿದುವು ಏನಣ್ಣಾ, ಏನು ಹೇಳಲಿ ? — ಬಿರುಗಾಳಿಯಲ್ಲಿ ತಳಿತ ಮಾವಿನ ಮರವು ಬೀಳುವಂತೆ ಆ ಹರೆಯದ ಹುಡುಗ ಬಿದ್ದುಬಿಟ್ಟ !"

ಎಲ್ಲರೂ ಅತ್ಯಂತ ಮೌನದಿಂದ, ಪ್ರಕ್ಷುಬ್ಧ-ಶಾಂತ ನೋಟದಿಂದ ಏನನ್ನೊ ನೋಡುತ್ತಿದ್ದರು. ಕಗ್ಗತ್ತಲಲ್ಲಿ ಆ ಚಿತೆಯು ಭೂಮಿಯ ಮೇಲೆ ಬಿದ್ದು ಗದರಿಸುತ್ತಿರುವ ಸಿಡಿಲಿನಂತೆ ಗೋಚರಿಸುತ್ತಿದ್ದಿತು.

ನಾಯಕನು ಕೂಗಿ "ರಾಮನಾಮ ಸತ್ಯಹೈ ! ಕಾಲನು ತಲೆಯ ಮೇಲೆ ನಿಂತಿರುವಾಗ ಯಾರ ಮಾತು ನಡೆಯುವುದು ! ಒಂದುಮಾತು, ಈ ತಾಯಿಯ ಮಗು ಅಲ್ಲಿಂದ ಓಡಿಹೋಗಿದ್ದರೆ ಏನಾಗುತ್ತಿತ್ತು ? ಆದರೆ ಭಾಗ್ಯದಲ್ಲಿ ಬರೆದುದು ಅಳಿಸುವುದಿಲ್ಲ." ಎಂದನು.

ಲಕ್ಕೊ ಮಿಸ್ತ್ರಿರೀ ಕಣ್ಣು ಕೆರಳಿಸಿ ಎಂದ. “ಏನು, ನನ್ನ ಮಗ ಓಡಿ ಹೋಗುತ್ತಿದ್ದನೇ!”....ನಿರುಪಾಯನಾಗಿ ಸುತ್ತಲೂ ನೋಡಿದ ಮತ್ತು ಎಂದ “ ಇಂಥ ಮಾತುಗಳನ್ನಾಡಬೇಡಿರಿ. ಅವನ ಆತ್ಮಕ್ಕೆ ದುಃಖವಾದೀತು. ಅವನು ತಿಳಿಗೇಡಿಯೇ ಆಗಿರಲಿ, ಪರವಾ ಇಲ್ಲ. ಆದರೆ ಅನ್ಯರಂತೆ ದುರ್ಬಲನಾಗಿರಲಿಲ್ಲ. ಅವನು ತನ್ನ ದೇಶದ ನಿಶಾನೆಯ—ನಾಡ ಗುಡಿಯ—ಮರ್ಯಾದೆಯನ್ನು ತನ್ನ ಪ್ರಾಣಕ್ಕಿಂತಲೂ ಶ್ರೇಷ್ಠವಾದುದೆಂದು ತಿಳಿದಿದ್ದನು.

“ ಹೂಂ ” ನಾಯಕನೆಂದನು “ ಏನಪ್ಪಾ, ಮೂರು ಮೊಳ ನಿಶಾನೆಯಿಂದ ದೇಶಕ್ಕೆ ಗೌರವ ಬರುತ್ತದೇನು ! ಏನು ಮಾತನಾಡುತ್ತೀರಿ? ನಾನು ನಿಮ್ಮ ಕಲ್ಯಾಣದ ಮಾತುಗಳನ್ನು ಯೋಚಿಸಿ ಹೀಗೆ ನುಡಿಯುತ್ತಿದ್ದೇನೆ. ಇವನು ಸತ್ತುದಕ್ಕೆ ನನಗೆ ದುಃಖವಿಲ್ಲವೇನು ? ಅದೆಲ್ಲ ಸರಿ, ಈ ನಿನ್ನ ಮುಪ್ಪಿನ ಕಾಲದಲ್ಲಿ ನಿನ್ನನ್ನು ಕಾಪಾಡುವವರು ಯಾರು? ಹರೆಯದ ಹುಡುಗ, ಮನೆಯ ಮುಕುಟ! ಚಿಕ್ಕ ಚಿಕ್ಕ ಮಕ್ಕಳು, ಮುಪ್ಪಿನ ತಂದೆತಾಯಂದಿರು ಇವರು ಎಲ್ಲಿಗೆ ಹೋಗಬೇಕು? ದೇಶ ನಿಮಗೆ ಊಟಕ್ಕೆ ಹಾಕುವುದೇನು ? ”

ಲಕ್ಕೊ ಒಂದು ನೀಳವಾದ ಉಸಿರುಗರೆದನು. ಅವನ ನೆರೆಯಲ್ಲಿದ್ದವನು ನಿಜವನ್ನೇ ಹೇಳುತ್ತಿದ್ದನು. ಅವನು ಇನ್ನು ಏನು ಮಾಡುವನು ? ದೇಶವು ಶ್ರೀಮಂತರಿಗಾಗಿ ಇದ್ದಿತು, ಬಡವರ ದೇಶವು ಎಲ್ಲಿದೆ ? ಭೂಬಾಡಿಗೆ, ನೀರಸಾರಿಗೆ, ದೀಪದ ಕರ, ಸತ್ತ ಮೇಲೂ ಸ್ಮಶಾನದ ಕರ ! ಕಾಯುವವನಿಗೆ ಕಾಣಿಕೆ! ಇಷ್ಟೆಲ್ಲ ಕೊಟ್ಟರೂ ಶ್ರಾದ್ಧ ಮಾಡಬೇಕು. ದೇವರಿಗೆ

ಕೊಡಬೇಕು, ಆ ಮೂಕ ದೇವರಿಗೆ! ಸುಮ್ಮಗೆ ತನ್ನ ಸಿಂಹಾಸನದಲ್ಲಿ ಕುಳಿತಿರುವ ದೇವರಿಗೆ!

ಸರಿ, ಇಷ್ಟೆಲ್ಲ ಆಗಬೇಕಾದ ಶಿಷ್ಟಾಚಾರ ಆಗಲೇಬೇಕು. ಆದರೆ ಆ ಹುಡುಗ ನಿಜವಾಗಿಯೂ ಅಷ್ಟು ಮೂರ್ಖನಿದ್ದ ನೇನು? ಅವನು ತಿಳಿದೂ ತಿಳಿದೂ ತನ್ನ ಅಸುವ ನೀಗಿದ ನೇನು? ಈ ಬಗೆಯ ವಿಚಾರಗಳ ಜಾಳಿಗೆಯೆ ಲಕ್ಷ್ಮನ ಮಿದುಳಿನಲ್ಲಿ ಹಬ್ಬಿತು.

ಶಂಭೂ ತಲೆಯಲ್ಲಾಡಿಸಿ ಎಂದ. "ಈ ದಿನ ಮುಂಜಾವಿನ ವರೆಗೆ ಅವನು ಚೆನ್ನಾಗಿದ್ದ. ಸುತ್ತಿಗೆಯ ಒಂದೊಂದು ಏಟಿನಿಂದ ಕಬ್ಬಿಣವನ್ನು ನೀರಾಗಿಸಿ ಬಿಡುತ್ತಿದ್ದ. ಆದರೆ ಈಗ ನೋಡಿರಿ, ಸೀಸದ ಒಂದು ಚಿಕ್ಕ ಗುಂಡು ಗಾಳಿಯಲ್ಲಿ ಘುಂಯಿಗುಡುತ್ತ ಬಂದಿತು, ಏನನ್ನೂ ಹೇಳದಲೆ ಅವನ ಎದೆಯನ್ನು ಹೊಕ್ಕಿತು. ಎಲುಬುಗಳನ್ನು ಮುರಿದು, ಮಾಂಸದ ಕರಣೆಗಳನ್ನು ಸೀಳಿ ಎದೆಯಲ್ಲಿ ಹೋಗಿ ಕುಳಿತಿತು. ಅವನು ಸತ್ತನು. ಅಯ್ಯೊ ದೇವ! ಬದುಕುವುದು ಅದೆಷ್ಟು ಬಿಗಿ, ಸಾಯುವುದು ಅದೆಷ್ಟು ಸುಲಭ!

ಅಜಬೀಲೋಹಾರನು ತಂಬಾಕದ ಹೊಗೆಯನ್ನು ಬಾಯಿಂದ ಹೊರಬಿಟ್ಟು "ಮನುಷ್ಯನು ಸತ್ತ ಮೇಲೆ ಏನನ್ನು ಬಿಟ್ಟು ಹೋಗುವನು? ಹೆಸರು ದೊಡ್ಡವರದು ಉಳಿಯುತ್ತದೆ! ಬಡವರ ಹೆಸರು ಯಾವ ಗಿಡದ ತಪ್ಪಲು! ಅವರು ತಮ್ಮ ಆಪ್ತೇಷ್ಟರಿಗೆ ತಮ್ಮ ನೆನಪೊಂದನ್ನು ಮಾತ್ರ ಬಿಟ್ಟು ಹೋಗುತ್ತಾರೆ. ಆದರೆ ಆ ನೆನಪು ಅವರನ್ನು ಮುಳ್ಳಿನಂತೆ ಚುಚ್ಚುತ್ತಿರುತ್ತದೆ ಇಡಿಯ ಜೀವಮಾನ! ಸಮಯವೇ ಅವರ ಗಾಯಕ್ಕೆ ಮುಲಮುಪಟ್ಟಿಯನ್ನು ಕಟ್ಟುತ್ತದೆ. ಎಲ್ಲರೂ ಪುನಃ ತಮ್ಮ ಕಾರ್ಯದಲ್ಲಿ

ತೊಡಗಿಬಿಡುತ್ತಾರೆ. ಯಾವಾಗಲಾದರೂ ನೆನಪು ಬಂದರೆ ಹಿಂದಿನ ಕತೆಯಂತೆ ಕಾಣುತ್ತದೆ ಅದು" ಎಂದು ನುಡಿದನು.

ಲಕ್ಕ್ಯಾ ಸಪ್ಪಗೆ ಕುಳಿತಿದ್ದನು. ಯಾರು ಅವನ ಮಗನ ಕೈಯಲ್ಲಿ ನಿಶಾನೆಯನ್ನು ಕೊಟ್ಟಿದ್ದರೊ ಅವರು ಎಲ್ಲಿದ್ದರು? ಅವರು ಈ ಮಸಣದಲ್ಲಿ ಇರಲಿಲ್ಲ. ಅವರೆಲ್ಲರೂ ದೊಡ್ಡ ಮನುಷ್ಯರು! ಶೂದ್ರರ ಮಸಣಕ್ಕೆ ಹೇಗೆ ಬಂದಾರು?

ಹಾಗಾದರೆ ಅವನ ಮಗನೇನು ತಪ್ಪು ಮಾಡಿದ್ದನೆ? ಅವನು ಏನೆಂದು ತಿಳಿದುಕೊಂಡು ನಿಶಾನೆಯನ್ನು ತನ್ನ ಕೈಗೆ ತೆಗೆದುಕೊಂಡ? ಗುಂಡಿನ ಮಳೆಯೆದುರಿಗೆ ಏನೆಂದು ತನ್ನ ಎದೆಯನ್ನು ಮುಂದೆ ಮಾಡಿಕೊಂಡು ನಿಂತಿದ್ದ? ಅವನಿಗೆ ಯಾರ ನೆನಪೂ ಬರಲಿಲ್ಲವೇನು?

ಹೆಂಗುಸರ ಅಳುವೂ—ಬಿಕ್ಕೂ ಕಡಮೆಯಾಗಿದ್ದವು. ಅವರು ತಮ್ಮ ಅತ್ತು ಅತ್ತು ಊದಿದ ಕಣ್ಣುಗಳಿಂದ ಚಿತೆಯನ್ನು ನೋಡುತ್ತಿದ್ದರು. ಆಗ ಚಿತೆಯಲ್ಲಿ ಹೆಣದ ತಿಲಮಾತ್ರ ಅಂಶವಾದರೂ ಇರಲಿಲ್ಲ.

ಲಕ್ಕ್ಯಾನ ಶರೀರವು ಕೋಪದಿಂದ ನಡುಗಿತು. ಸಂಸಾರವು ಇಷ್ಟು ಸ್ವಾರ್ಥಿಯಾಗಿರುವದೇಕೆ? ತನ್ನ ಮಗನು ಅನ್ಯರಿಗಾಗಿ ತನ್ನ ಜೀವನ ಹೋಮ ಮಾಡಿದನು, ತನ್ನನ್ನು ಮರೆತು ಪರರಿಗಾಗಿ ಪ್ರಾಣವನ್ನು ನೀಗಿದನು, ಆದರೆ ಆ ಜನರು ಇಲ್ಲಿ ಕುಳಿತು ಮಾತುಗಳನ್ನಾಡುತ್ತಿದ್ದಾರೆ!

ನಾಯಕನು ಮೆಲ್ಲಗೆ ನುಡಿದನು "ಅಜಬೀ, ನೋಡು ಎಲ್ಲಿಗೆ ಬಂತು? ಹಸಿವೆಯಿಂದ ಪ್ರಾಣಗಳು ಬಾಯಿಗೆ ಬರುತ್ತಿವೆ." ಎಂದು.

ಮರೆತು ಹೋದ ಮಾತು ನೆನಪಿಗೆ ಬಂದ ಬಳಿಕದಂತೆ ಫೋಟೊ ಎಲ್ಲಕಡೆಗೂ ಸಿಟ್ಟಿಸಿ ನೋಡಿದ. "ಕರೀಮಖಾನ ಹವಾಲ್ದಾರ ಎನ್ನುತ್ತಿದ್ದ—ಯಾರು ಹೆಣದ ಕೂಡ ಮಸಣಕ್ಕೆ ಹೋಗುವರೊ ಅವರ ಹೆಸರನ್ನು ಸರಕಾರದ ಪಟ್ಟಿಯಲ್ಲಿ ಸೇರಿಸಿಕೊಳ್ಳಲಾಗುವದು."

"ಇದೇಕೆ?"

"ಏಕೆಂದರೆ ಅವನು ಸರಕಾರದ ವೈರಿಯಾಗಿದ್ದನು. ತಿಳಿಯುವದಿಲ್ಲವೇನು? ಅವನು ಗುಂಡು ಹಾರಿಸಲಿಲ್ಲ, ಆದರೆ ಗುಂಡನ್ನು ಎದೆಯಲ್ಲಿರಿಸಿಕೊಂಡ! ಎಂದ ಮೇಲೆ ಅವನು ವೈರಿಯಾದನೊ ಇಲ್ಲವೊ?"

"ಹೌದು!" ಎಂದು ನಾಯಕನು ತನ್ನ ಬಟ್ಟೆಗಳನ್ನು ಜಾಡಿಸಿಕೊಳ್ಳಲಾರಂಭಿಸಿದನು ಮತ್ತು ಎಂದನು "ಸರಿ, ನಿಜವಾದುದನ್ನೇ ಹೇಳುತ್ತಿರುವೆ. ಅವನು ಅಂಥಿಂಥವರ ಗುಂಡಿನಿಂದ ಸಾಯಲಿಲ್ಲ, ಸರಕಾರದ ಗುಂಡಿನಿಂದ ಸತ್ತ. ವಿಕಟ ಪರಿಸ್ಥಿತಿ; ಏಕಪ್ಪಾ ಅಜಬೀ?"

"ಮಾತು—ಸಂಗತಿ ಬಹಳ ವಿಚಿತ್ರವಾಗಿದೆ. ಕರೀಮಖಾನ ಹವಾಲ್ದಾರನೆಂದರೇನು ಚಿಕ್ಕ ಮನುಷ್ಯನೇ? ದೊಡ್ಡ ದೊಡ್ಡ ಸಾವುಕಾರರು ಅವನ ಹೆಸರು ಕೇಳಿದರೆ ನಡುಗುತ್ತಾರೆ ಈ ಊರಲ್ಲಿ ಅವನದೇ ರಾಜ್ಯ. ಏನು ಬೇಕಾದುದನ್ನು ಮಾಡಬಲ್ಲ" ಎಂದು ಅಜಬೀ ಲೋಹಾರ ಎನ್ನತೊಡಗಿದ.

ಎಲ್ಲ ಜನರು ಅಂಜಿ ಅತ್ತ ಇತ್ತ ನೋಡತೊಡಗಿದರು—ಕರೀಮಖಾನನ ಭೂತವು ಅವರನ್ನು ನುಂಗಲು ಬರುತ್ತಿರುವದೆ ಏನೊ ಎಂಬಂತೆ.

ತಾರೆಗಳ ನೆರಳಿನಲ್ಲಿ ಮರಗಳು ತಮ್ಮ ರೆಂಬೆಗಳನ್ನು ನೀಡಿ ಭಿಕ್ಷೆಬೇಡುತ್ತಿರುವವೊ ಏನೊ ಎಂಬಂತೆ ನಿಂತುಕೊಂಡಿದ್ದವು.

ಲಕ್ಕೂ ಮೊಳಕಾಲುಗಳ ಮೇಲೆ ತಲೆಯನ್ನು ಇಟ್ಟು ಕೊಂಡು ಅರ್ಧ ಚೇತನಾವಸ್ಥೆಯಲ್ಲಿ ಇದ್ದಂತೆ ಕುಳಿತುಕೊಂಡಿದ್ದನು. ಬಹಳ ಜನರು ಒಬ್ಬೊಬ್ಬರಂತೆ ಹೊರಟುಹೋದರು. ಮೂರು ನಾಲ್ಕು ಜನರು ಮಾತ್ರ ಉಳಿದುಕೊಂಡರು.

ಲಕ್ಕೂನ ಅಂತಃಕರಣ ಒಳಗೇ ಅಳುತ್ತಿದ್ದಿತು. ದೇಶ ಮತ್ತು ದೇಶದವರು ! ಅವರು ಹೀಗೇಕೆ ಮಾಡಿದರು ? ಮೃತ್ಯುವಿನ ಎದುರಿನಲ್ಲಿ ಎಲ್ಲರೂ ಸರಿಸಮಾನರು. ಎಲ್ಲರಿಗೂ ಒಂದು ದಿನ ಇಲ್ಲಿಗೇ ಬರಬೇಕಾಗುವುದು. ಇದೇ ಮಣ್ಣಿನಲ್ಲಿ ಹೂತು ಹೋಗಬೇಕಾಗುವದು, ಇದೇ ಚಿತೆಯಲ್ಲಿ ನಿದ್ರಿಸಬೇಕಾಗುವದು. ಒಂದು ಕ್ಷಣಮಟ್ಟಿಗಾದರೂ ಅವರಿಗೆ ಬರಲಾಗುತ್ತಿರಲಿಲ್ಲವೇನು ? ಸತ್ತವನ ವಿಧವೆಗೆ, ತಾಯಿಗೆ ಸಮಾಧಾನವನ್ನು ಹೇಳಿ ಹೋಗಲಿಕ್ಕಾದರೂ ಬರಲಾಗುತ್ತಿದ್ದಿಲ್ಲವೇನು !

ಸೇಠ ಭಜ್ಜೂ ಮಲ್ಲರು ಕಾಂಗ್ರೆಸ ಕಮೀಟಿಯ ಅಧ್ಯಕ್ಷರು ! ನನ್ನ ತರುಣ ಮಗನ ಜೀವನವನ್ನು ತೆಗೆದುಕೊಂಡ ಮೇಲೂ ನನ್ನ ಸಾಲವನ್ನು ಸೂಟು ಮಾಡಲಿಕ್ಕಿಲ್ಲವೇನು ?

ಕುಂವರ ಪ್ರತಾಪಸಿಂಹರು — ದೊಡ್ಡ ದೇಶಭಕ್ತರು ! ಕರೀಮಖಾನ ಹವಾಲ್ದಾರನ ಪಂಜರದಿಂದ ನನ್ನನ್ನು ಬಿಡಿಸಿಕೊಳ್ಳಲಿಕ್ಕಿಲ್ಲವೇನು ?

ಮಳೆಗಾಲ ಬರುತ್ತಿದೆ, ಮನೆಯ ಛಪ್ಪರ ಬಿಗಿದು ಹಂಚು ಹೊಚ್ಚುವುದು ಇದೆ, ಗೋಡೆಯನ್ನು ಇರಿಸಲು ಹಸಿಗಳಿಂದ ಜೋಪಾನ ಮಾಡಬೇಕಾಗಿದೆ, ಭಟ್ಟಿಯನ್ನು ಸರಿಪಡಿಸಬೇಕಾಗಿದೆ, ಆದರೆ ಈಗ ಅವನ ಭುಜಗಳಲ್ಲಿ ಮೊದಲಿನಷ್ಟು ಬಲ

ವೆಲ್ಲಿದೆ? ಕೂಲಿಕಾರನ ಮಗನು ಒಂದು ಚಿಕ್ಕ ಗುಂಡಿನಿಂದ—ಆ ಗುಂಡೂ ಒಬ್ಬ ಲೋಹಾರನಿಂದಲೇ ತಯಾರಿಸಲ್ಪಟ್ಟದು—ಸತ್ತು ಹೋದನು ಮತ್ತು ಆ ಬೆಂಕಿಯು ಅವನನ್ನು ತೆಗೆದು ಕೊಂಡು ಹೋಯಿತು.

ಚಿತೆಯು ಕುಸಿಬಿದ್ದು ತಣ್ಣಗಾಗತೊಡಗಿತು. ಹೆಣ್ಣು ಮಕ್ಕಳು ಅದಕ್ಕೆ ನೀರು ಸಿಂಪಡಿಸಿದರು. ಗಂಡುಮಕ್ಕಳು ತಮ್ಮ ಕಂಬನಿಗಳನ್ನು ಸಿಂಪಡಿಸಿ "ರಾಮನಾಮ ಸತ್ಯ ಹೈ" ಘೋಷದಿಂದ ದಿಗಂತವನ್ನು ಮೊಳಗಿಸಿದರು. ದೂರದಿಂದ ನರಿಗಳು ದನಿಗೂಡಿಸಿದುವು—ಹುವಾಂ! ಹುವಾಂ! ಹುವಾಂ!!

ಎಲ್ಲರೂ ಎದ್ದು ಹೊರಡಲು ಅನುವಾದಾಗ ಲಕ್ಕೂ ತನ್ನ ಕಾಲಿನ ಬಳಿಯಲ್ಲಿ ಒಂದು ಬಟ್ಟೆಯ ತುಣುಕು ಬಿದ್ದುದನ್ನು ನೋಡಿದ. ಮೂಬಣ್ಣದ ಹರಿದ ನಿಶಾನೆಯ ತುಣುಕು ಅದು. ತನ್ನ ಮಗನು ಎದೆಗಪ್ಪಿಕೊಂಡು ಸತ್ತ ನಿಶಾನೆಯ ತುಣುಕು ಅದು! ಆ ನಿಶಾನೆಯು ನೋಡಲು ಎಷ್ಟು ಕುರೂಪಾಗಿದ್ದಿತು-ಹುಲ್ಲಿನಂತೆ ಹಸಿರು, ಮುಪ್ಪಿನಂತೆ ಬಿಳುಪು, ರೋಗಿಯಂತೆ ಕಂದಿದ ಕೇಸರಿ ಬಣ್ಣ!

ಈಗ ಅದು ರಕ್ತರಂಜಿತವಾಗಿ ಕೆಂಪಾಗಿದ್ದಿತು—ಕೆಂಪು! ಬದುಕು-ಸಾವಿನ ಬಣ್ಣ!

ಲಕ್ಕೂ ಅದನ್ನೆತ್ತಿಕೊಂಡನು. ಅದರಲ್ಲಿ ಅದಾವ ಮಾಟ-ಜಾದೂ ಇದೆ ಇಷ್ಟು ಜನರು ಅದರ ಪ್ರಭಾವಕ್ಕೆ ಒಳಗಾಗಿ ತಮ್ಮ ಸರ್ವಸ್ವವನ್ನು ಅರ್ಪಿಸಿಬಿಡುವುದುಕ್ಕೆ! ಸಾಧಾರಣ ಅರಳೆಯ ಖಾದಿ, ಸಾಮಾನ್ಯ ಕೈಮಗ್ಗದ ಮೇಲೆ ನೆಯ್ದುದು; ಒಬ್ಬ ಬಣ್ಣಗಾರನು ಕಚ್ಚಾ ಬಣ್ಣವನ್ನು ಕೊಟ್ಟುದು. ಇದರಲ್ಲೇನು ಇದ್ದೀತು!

ಏನೇ ಇರಲಿ, ಈಗ ಅದು ಒಬ್ಬನ ರಕ್ತದಿಂದ ಬಣ್ಣಕೊಡಲ್ಪಟ್ಟಿದ್ದಿತು, ಆ ರಕ್ತ ತಾಜಾ ಇದ್ದಿತು—ವಸಂತದ ಹೊಸ ಹೂವಿನಂತೆ, ಧಗಧಗಿಸುತ್ತಿರುವ ಉರಿಯುಕೆಂಡದಂತೆ !

ಒಮ್ಮೆಲೆ ಲಕ್ಮೋಸಿಗೆ ಒಂದು ವಿಚಾರವು ಬಂದಿತು. ತನ್ನ ಮಗನ ದಹನಸ್ಥಾನದಲ್ಲಿ ನಿರ್ಮಿಸಿದ ಕಲ್ಲನ್ನು ಕಿತ್ತಿ ಎಸೆದು ಅದರ ಸ್ಥಾನದಲ್ಲಿ ಈ ಬಟ್ಟೆಯ ನಿಶಾನೆಯ ತುಣುಕನ್ನು, ತನ್ನ ಮಗನ ನೆತ್ತರದಿಂದ ಒದ್ದೆಯಾದ ಪತಾಕೆಯನ್ನು ಇಡಬೇಕೆಂದು !

ಹೆಣ್ಣುಮಕ್ಕಳು ಅಳುತ್ತ ಮನೆಗೆ ಹೊರಟಿದ್ದರು. ಗಾಳಿಯು ಮೆಲ್ಲಗೆ ಸುಳಿದಾಡುತ್ತಿದ್ದಿತು. ಗಾಯಗೊಂಡ ಪಕ್ಷಿಯ ಕಿರುಚುವಿಕೆಯಂತೆ ಶಬ್ದಮಾಡುತ್ತ ಹರಿಯುತ್ತಿರುವ ನದಿಯ ಸ್ವರ ಕೇಳಿಬರುತ್ತಿತ್ತು.

ಭೂಮಿಯ ಮೇಲಿನ ಬೆಂಕಿ—ನಂದಾದೀಪ ಆರಿಹೋಗಿದ್ದಿತು; ಆದರೆ ಆಕಾಶದಲ್ಲಿ ತಾರೆಗಳು ಮಿನುಗುತ್ತಿದ್ದುವು.

# ತಾರೂ

—ಂ:◆:ಂ—

[ ಡಾಕ್ಟರ ಸಲೀಕ ಹುಸೇನ ಸಹಿರ್‌ಃ ಅವರು ಪಂಜಾಬದ ಹೆಸರಾದ ಕತೆಗಾರರು. ಉರ್ದು ಭಾಷೆಯಲ್ಲಿ ಉತ್ತಮ ತರಗತಿಯ ಕತೆಗಳನ್ನು ಬರೆದಿದ್ದಾರೆ. ಅವರ ಭಾಷೆಯೂ ಶೈಲಿಯೂ ಪ್ರೇಮ ಕಥಾರಚನೆಗೆ ಅತ್ಯಂತ ಉಪಯುಕ್ತವಾಗಿವೆ.

'ತಾರೂ' ಒಂದು ಅದ್ಭುತ ತರದ್ದು ಕಥಾನಕ. ಪ್ರೇಮವು ಇದರಲ್ಲಿ ವ್ಯಾಪಿಸಿತ್ತು ಸಿಂಗರಿಸಿದೆ. ಪಂಜಾಬದ ಒಕ್ಕಲಿಗರ ಸುರಮ್ಯ ಜೀವನಚಿತ್ರವು ಸ್ವಾಭಾವಿಕವಾಗಿಯೂ ಮನೋಹರವಾಗಿಯೂ ಕಂಗೊಳಿಸುತ್ತಿದೆ. ಇಷ್ಟು ಸರಸವಾಗಿ ಇನ್ನಾರೂ ಪಂಜಾಬದ ಒಕ್ಕಲಿಗರ ಜೀವನವನ್ನು ಚಿತ್ರಿಸಿರುವುದಿಲ್ಲ ಇದು ವರೆಗೆ, ಎಂದು ಹೇಳಿದರೆ ಅತಿಶಯೋಕ್ತಿಯಾಗದು. ಹುಡುಗರ ಹೃದಯದ ಮೇಲಾದ ಕತೆಯು ಪರಿಣಾಮವು ಬೇಗ ಅಳಿಯದು. ]

ಪಾಕಿಸ್ತಾನವು ಸುರುವಾಗಿ ಬಹಳ ದಿನಗಳಾಗಿಲ್ಲ. ಪಂಜಾಬದ ಪ್ರಸಿದ್ಧ ಇಲಾಖೆಯಾದ ಝಾಂಗಾ ಕೇಂದ್ರದಲ್ಲಿದ್ದ 'ಜಲಿಲ್ಲಾ-ಕೆ'ಯಲ್ಲಿ ಸಾಯಂಕಾಲ ಅದಾವಾಗೊ ಆಗಿಹೋಗಿದ್ದಿತು. ಈ ಊರಲ್ಲಿ ಒಂದು ರೂಢಿ ಪ್ರಸಿದ್ಧವಿದೆ. ಊರಿನ ಹುಡುಗ ಎಲ್ಲಿಯ ವರೆಗೆ ಒಂದು ಕೃತ್ಯವ ಮಾಡಿ ತನ್ನ ಪುರುಷತ್ವವನ್ನು ತೋರಿಸುವುದಿಲ್ಲವೊ ಅಲ್ಲಿಯ ವರೆಗೆ ರುಮಾಲವನ್ನು ಸುತ್ತಲು ಅಧಿಕಾರಿಯಾಗುವುದಿಲ್ಲ ಅವನು. ಇಡಿ ಊರು ಶಾಂತಿಯಲ್ಲಿ ಮುಳುಗಿದೆ. ಎಲ್ಲೆಡೆಯಲ್ಲಿ ನಿಸ್ತಬ್ಧತೆಯಿದೆ. ಅಲ್ಲಲ್ಲಿ ಬಿದ್ದ ಸಗಣಿಯ ಗುಂಪಿಯನ್ನು ಒಂದು ಹುಂಜವು ಕೆದರುತ್ತದೆ ಮತ್ತು ಅಂತಃಪುರದ ಒಂದು ಪ್ರೀತಿಯ ಕೋಳಿಯನ್ನು ಕರೆಯುತ್ತಿದೆ. ಅದು ಕಾಳನ್ನು ತಿಂದ ಮೇಲೆ ಸಂತೋಷದಿಂದ ಒಂದು ಕೂಗನ್ನು ಹಾಕುತ್ತದೆ. 'ಕಾ ಕಾ' ಮಾಡುತ್ತ ತತ್ತಿಯನ್ನು ಇಡಲಿಕ್ಕೆ ಕೋಳಿಯು

ಸ್ಥಳವನ್ನು ಹುಡುಕುತ್ತದೆ. ಒಂದು ಗೋವಮಾತೆಯ 'ಅಂಬಾ' ಎನ್ನುವ ಶಬ್ದವೂ ಊರಿನ ನಿಸ್ತಬ್ಧತೆಯನ್ನು ಭಂಗಮಾಡುತ್ತದೆ. ಜಾಟರು ಹೊಲಗಳಲ್ಲಿ ರಂಟೆಗಳನ್ನು ಬಿಟ್ಟು ಬಂದು ಹೊತ್ತಾಗಿಹೋಗಿದೆ. ತಮ್ಮ ದನಗಳಿಗೆ ಮೇವು ಹಾಕಿ ವಿಶ್ರಾಂತಿಯನ್ನು ಪಡೆಯುತ್ತಿದ್ದಾರೆ. ಮುದುಕರು ಪಡಸಾಲೆಯಲ್ಲಿ ಸ್ಥಿರವಾಗಿರಿಸಿದ ಡೊಳ್ಳಾರಿಯ ಮೇಲೆ ಕುಳಿತುಕೊಂಡು ತಮ್ಮ ತಾರುಣ್ಯದಲ್ಲಿನ ಕಾರ್ಯಗಳನ್ನೂ ಜೇಲಿನ ಅನುಭವಗಳನ್ನೂ ದಂಗೆಗಳನ್ನೂ ಯುದ್ಧಗಳನ್ನೂ ಕುರಿತು ಬಹು ಮೂಲ್ಯವಾದ ಮುಕ್ತಾಫಲಗಳನ್ನು ಸುರಿಸುತ್ತಿದ್ದಾರೆ. ಎಲ್ಲೋ ಒಬ್ಬ ಜಾಟ ರಂಟೆಯನ್ನು ಹೊತ್ತುಕೊಂಡು ಒಬ್ಬ ಶಿಲ್ಪಿಯ ಮನೆಗೆ ಹೊರಟಿದ್ದಾನೆ. ಕೆಲವರು ಹುಡುಗಿಯರು ನೀರು ತುಂಬುವದಕ್ಕಾಗಿ ಬಾವಿಗೆ ಬಂದಿದ್ದಾರೆ. ಬಾವಿಯೆಂದರೆ ಅವರಿಗೆ ಒಂದು ಕ್ಲಬ್ಬು ಇದ್ದ ಹಾಗೆ. ಇಲ್ಲಿ ಅವರು ಒಬ್ಬರನ್ನೊಬ್ಬರು ಕಟ್ಟಳಿಗುಳಿಯನ್ನಾಡಿಸುವರು, ಭುಜಕ್ಕೆ ಭುಜವನ್ನು ತಿವಿಯುವರು, ನೀರುಹನಿಗಳನ್ನು ಸಿಂಪಡಿಸುವರು, ಗಹಗಹಿಸಿ ನಗುವರು. ಯಾವನಾದರೂ ಒಬ್ಬ ಊರಿನ ತರುಣ ಈ ಹುಡುಗಿಯರು ಮಾರ್ಗದಲ್ಲಿ ಕಂಡರೆ ತನ್ನ ಮೀಸೆಯ ಮೇಲೆ ಕೈಯೆಳೆಯುವನು. ತನ್ನ ಬಗೆಗೆ ಹುಡುಗಿಯೊರ್ವಳು ಕೃಪಾಕಟಾಕ್ಷವನ್ನು ಬೀರಿದರೆ ಅವನ ಮುಖವು ಕೆಂಪೇರುವುದು ಎಂದು ಬೇರೆ ಹೇಳಬೇಕಾಗಿದೆಯೇ ?

ಈ ಸಲ ಹತ್ತಿಯ ಬೆಳೆ ಚೆನ್ನಾಗಿ ಬಂದಿದೆ. ಆದ್ದರಿಂದ ನಾಲ್ಕೂ ಕಡೆಗೆ ಸಂಪನ್ನತೆಯ ಚಿಹ್ನವಿದೆ ಈಗ ಲದ್ಧಾಸಿಂಹನ ಖಾದೀ ಉಡುಪು ಅಗಸನಿಂದ ಒಗೆದು ಬಂದಿದೆ; ಚಂಚಲಸಿಂಹನು ಒಂದು ಉದ್ದವಾದ ನಿಲುವಂಗಿಯನ್ನು—

ಪಾರಸೀಕೋಟು ಎನ್ನಿ—ಹೊಲಿಸಿಕೊಂಡಿದ್ದಾನೆ, ಬಾಯಲ್ಲಿ ಚಿನ್ನದ ಅಣಸನ್ನೂ ಹಲ್ಲಿಗೆ ಕೂಡಿಸಿಕೊಂಡುದು ಕಾಣುತ್ತಿದೆ. ಊರಿನ ಎಷ್ಟೋ ತರುಣರು ನಾನಾ ಬಣ್ಣಗಳ ರುಮಾಲುಗಳನ್ನು ಕೊಂಡು ತಲೆಗೆ ಸುತ್ತಿಕೊಂಡು ತಿರುಗಾಡುತ್ತಿದ್ದಾರೆ. ಹುಡುಗಿಯರ ಕೈಗೆ ಹಸ್ತಿದಂತದ ಬಳೆಗಳೂ ಬಂದಿವೆ. ಝುಂಡಾಸಿಂಹನು ತನ್ನ ಕೆಲಸಕ್ಕೆ ಬಾರದ ತಟ್ಟೂವನ್ನು ಮಾರಿ ಒಂದು ಸುಂದರವಾದ, ಹೃಷ್ಟಪುಷ್ಟವಾದ ಕುದುರೆಯನ್ನು ಕೊಂಡು ಸವಾರಿ ಮಾಡುತ್ತಾನೆ ಮತ್ತು ಅನಾವಶ್ಯಕವಾಗಿದ್ದರೂ ಕುದುರೆಯ ಸವಾರಿ ಮಾಡಿದಾಗ ಕೆಮ್ಮುತ್ತಾನೆ. ಪಟವಾರಿಯವರ ಹುಡುಗನು ಪಟ್ಟಣದಿಂದ ಒಂದು ಬೈಸಿಕಲ್ಲನ್ನು ಕೊಂಡು ತಂದಿದ್ದಾನೆ. ಎಕ್ಕಾಗಾಡಿಯ ಹುಸೇನನು ಗ್ರಾಮಾಫೋನನ್ನು ತಂದಿದ್ದಾನೆ. ಈ ಅವನ ಮನೆಯಿಂದ ರೆಕಾರ್ಡಿನ "ಪಲ್ಲಾ ಮಾರಕೆ ಬುಝಾ ಗಯೀ ದಿವಾ" (ಸೆರಗನ್ನು ಬೀಸಿ ದೀಪ ಆರಿಸಿ ಹೋದಳು) ಎಂಬ ಗೀತದ ಸೊಲ್ಲು ಕೇಳಿಬರುತ್ತಿದೆ. ರಂಗೀಲಾ ದಾದಾ ಅತ್ತೆ ಮನೆಯಿಂದ ಹುಡುಗಿಯನ್ನು ಕರೆದುಕೊಂಡು ಬರುವಾಗ ಚಿನ್ನದ ಹಲ್ಲು ಹಾಕಿಸಿಕೊಂಡು ಬಂದಿದ್ದಾನೆ.

ಈ ಸಲ ಸುಗ್ಗಿಯು ಚೆನ್ನಾಗಿ ಆಗಿದ್ದರಿಂದ, ಎಲ್ಲ ಕಡೆಗೂ ಆನಂದ ಮೊಳಗಿದೆ, ಸಂಪನ್ನತೆಯು ಹರಡಿದೆ. ಆದುದರಿಂದ ಪಾಲಾಸಿಂಹನು ತನ್ನ ಅಕ್ಕರೆಯ ಒಬ್ಬನೇ ಮಗನಾದ ತಾರೂನ ಮದುವೆಯನ್ನು ನಿಶ್ಚಯಿಸಿದ್ದಾನೆ. ಮಗುವೆಂದರೆ ಮನೆಯ ದೀಪ. ಅವನ ಮದುವೆಯಾಗದೆ ಉಳಿದರೆ ಮನೆಗೆ ಶೋಭೆಯುಂಟಾಗುವುದಿಲ್ಲ. ಆನಂದದ ದಿನವನ್ನು ಒಂದು ದಿನವಾದರೂ ಮುಂದಕ್ಕೆ ಹಾಕುವುದು ಸರಿಯಲ್ಲವೆಂದು ಎಲ್ಲ

ರಿಗೂ ಎನಿಸುವುದು ನೋಡಿರಿ. ಓಣಿಯಲ್ಲೆಲ್ಲ ಈಗ ಪಾಲಾಸಿಂಹನ ಮನೆಯ ಮಾತೇ ಮಾತು. ಅಣ್ಣತಮ್ಮಂದಿರು, ಆಪ್ತೇಷ್ಟರು ಬಂದಿದ್ದಾರೆ. ಒಂದು ವಿಶಿಷ್ಟತರದ, ಉತ್ತಮವೆಂದು ತಿಳಿಯಲ್ಪಟ್ಟ ಸಾರಾಯಿಯ ಡಬ್ಬಿಯೊಂದನ್ನೂ ತರಿಸಲಾಗಿದೆ ಬೆಳಗಿನಿಂದ ಅನೇಕ ಬಾಟಲಿಗಳು ಬರಿದಾದರೂ ಯಾರ ಸ್ಮೃತಿಯೂ ಇದು ವರೆಗೆ ತಪ್ಪಿಲ್ಲವೆಂಬುವೇ ಆಶ್ಚರ್ಯದ ಮಾತು.

"ನನ್ನ ತಲೆಯಿಂದ ಯಾರಾದರೂ ಒಂದು ಪಾವು ನೆತ್ತರವನ್ನು ತೆಗೆದುಕೊಟ್ಟರೆ ಅವರಿಗೆ ಒಂದು ರುಮಾಲ ಮತ್ತು ಒಂದೂಕಾಲು ರೂಪಾಯಿ ಇನಾಮು ಕೊಡುವೆ" ಎಂದು ಪಾಲಾಸಿಂಹನು ಆಹ್ವಾನವನ್ನು ಕೊಟ್ಟನು.

"ನೀನು ಒಂದು ಪಾವು ಹೇಳುತ್ತೀಯಾ? ನಾನು ಒಂದು ಸೇರು ರಕ್ತವನ್ನು ತೆಗೆದುಕೊಡುವೆನು" ಎಂದು ಹೀರಾ ಚೌಧರಿಯು ಆಹ್ವಾನವನ್ನು ಸ್ವೀಕರಿಸಿ ತನ್ನ ಲಾಠಿಯನ್ನು ಎತ್ತಿದನು

ಇಬ್ಬರೂ ಲಾಠಿಯುದ್ಧವನ್ನು ಹೂಡಿದರು. ಒಬ್ಬರ ಮೇಲೊಬ್ಬರು ಏರಿ ಹೋಗತೊಡಗಿದರು. ಕೆಲವರು ನಡುವೆ ಬಂದು ಅವರನ್ನು ಉಳಿಸಿದರು.

"ನಾನೂ ಲಾಠಿಯನ್ನು ಚೆನ್ನಾಗಿ ಮಾಡಿಸಿದ್ದೇನೆ. ಅದರ ಹಿಡಿಕೆಯು ಬಹು ಬಲವಾಗಿದೆ. ಅದರ ಗುಂಡು ಹಿಡಿಕೆ ಸೀಸಿನ ಗುಂಡೇ ಆಗಿದೆ. ಮಾಡಿಸಿ ಎರಡು ತಿಂಗಳಾದವು. ಆದರೆ ಅದಕ್ಕೆ ಇದು ವರೆಗೆ ಯಾರ ನೆತ್ತರವನ್ನೂ ಕುಡಿಸಲಾಗಿಲ್ಲ" ಎಂದು ನಿರಾಶೆಯಿಂದ ಆರಜೂ ನುಡಿದನು.

ಇದೇ ಬಗೆಯ ಮಾತುಗಳಲ್ಲಿ ಸಾಯಂಕಾಲವಾಯಿತು. ಹೊರಗೆ ಬೀದಿಯಲ್ಲಿ ಯಾರೋ ಕೃತ್ರಿಮವಾಗಿ ಕೆಮ್ಮುವುದು ಕೇಳಿಸಿತು. ಪಾಲಾಸಿಂಹನು ಓಡುತ್ತ ಓಡುತ್ತ ಹೊರಗೆ ಹೋದನು. ಅಲ್ಲಿ ಯಾರೂ ಇರಲಿಲ್ಲ. ನಿರಾಶನಾಗಿ ಒಳಗೆ ಬಂದನು.

ಶಂಘಾರೂಸಿಂಹನು ಪಾಲಾಸಿಂಹನಿಗೆ ದೂರದ ನೆಂಟನಾಗ ಬೇಕು. ಇಬ್ಬರಲ್ಲೂ ಮನಸ್ತಾಪವಿತ್ತು: ಹಗೆತನವು ಸಾಕಷ್ಟಿತ್ತು. ಪಾಲಾಸಿಂಹನನ್ನು ನೋಡಿದ ಕೂಡಲೆ ಕೃತ್ರಿಮ ಕೆಮ್ಮು ಕೆಮ್ಮುವ ರೋಗ ಶಂಘಾರೂಸಿಂಹನಿಗೆ ಅಂಟಿಕೊಂಡಿತ್ತು. ಒಬ್ಬರ ಚಪ್ಪರ ಇನ್ನೊಬ್ಬರ ಮನೆಯ ಮೇಲೆ ಇದ್ದುದರಿಂದ ನೀರೂ ಕೂಡಿ ಹರಿಯುತ್ತಿದ್ದವು ಇದು ಏಕೆ? ನೀರಿನ ಸಲುವಾಗಿ ಆಗಾಗ್ಗೆ ಇಬ್ಬರಲ್ಲೂ ಜಗಳಗಳು ಆಗುತ್ತಿದ್ದವು. ಒಮ್ಮೆ ಪಾಲಾಸಿಂಹನು ಶಂಘಾರೂಸಿಂಹನ ವಿರುದ್ಧವಾಗಿ ಸುಳ್ಳು ಸಾಕ್ಷಿಯನ್ನೂ ಹೇಳಿದ್ದನು.

“ಮನೆಯ ಹೊರಗೆ ಕೆಮ್ಮಿದರೆ ಫಾಂಸೀ ಕೊಡುವುದಾರಿಗೆ?” ಎಂದು ಪಾಲಾಸಿಂಹನ ಹೆಂಡತಿ ಜಿನ್ದೋ ನುಡಿದಳು.

ಪಾಲಾಸಿಂಹನು ತನ್ನ ಸಂಗಡಿಗರ ಸಂಗಡ ಮಾತುಕತೆ ಯಾಡುತ್ತಿದ್ದನು. ಇಷ್ಟರಲ್ಲಿ ಯಾರೋ ಹೊರಗೆ ಬೀದಿಯಲ್ಲಿ ಬಾಯಿಯ ಮೇಲೆ ಕೈಯಿಟ್ಟುಕೊಂಡು ಕುರಿಯಂತೆ ಕೂಗಿದರು. ಸರಿ, ಕೇಳುವುದೇನು? ಬೆಂಕಿಯಲ್ಲಿ ತುಪ್ಪ ಸುರುವಿದಂತಾಯಿತು, ಒಂಟೆಯ ಮೇಲೆ ಕೋನೆಯ ಹೊರೆ ಹೇರಿದಂತಾಯಿತು. ಎಲ್ಲರೂ ಹೊರಬಿದ್ದರು ಲಾಠಿ, ಕೊಡಲಿ, ರೆಂಟೆಯ ನಗ, ಮಂಚದ ಕಾಲು, ಯಾರ ಕೈಗೆ ಏನು ಸಿಕ್ಕಿತೊ ತೆಗೆದುಕೊಂಡು ಹೋದರು. ಹೊರಗೆ ಬೀದಿಯಲ್ಲಿ ಶಂಘಾರೂ

ಸಿಂಹನೂ ತನ್ನ ಎರಡು ಡಜನ್ ಜನರೊಂದಿಗೆ ಕೃಪಾಣ, ಕೊಡಲಿ, ಬರ್ಚಿಗಳನ್ನು ತೆಗೆದುಕೊಂಡು ನಿಂತಿದ್ದನು; ಕುರಿಯಂತೆ ಕೂಗುತ್ತಿದ್ದನು; ಜಿಗಿಯುತ್ತಿದ್ದನು. ಪಾಲಾಸಿಂಹನು ಕೆರಳಿದ ಹುಲಿಯಂತೆ ಮುಂದೆ ಸಾಗಿದನು. ಚೌಧರೀ ಹೀರಾಸಿಂಹನು ತನ್ನ ಲಾಠಿಯನ್ನು ತೆಗೆದುಕೊಂಡು ಜಯಘೋಷ ಮಾಡಿದನು. ಅವನ ಕಣ್ಣುಗಳು ಕೆಂಡದಂತೆ ಕೆಂಪಾಗಿದ್ದವು. ಎಲ್ಲರ ಮೂಗಿನ ಸೊಳ್ಳೆಗಳೂ ಉಬ್ಬಿದ್ದವು. ಎಲ್ಲರೂ ಒಟ್ಟು ಸೇರಿ ಜಗಳವಾಡತೊಡಗಿದರು. ಒಂದು ಅರ್ಧಗಂಟೆಯ ವರೆಗೆ ಯುದ್ಧವಾದಂತೆಯೇ ಆಯಿತು. ಊರಿನ ಉಳಿದ ಜನರಿಗೆ ಈ ಜಗಳದಲ್ಲಿ ಕೈಹಾಕಿ ಬಿಡಿಸುವ ಧೈರ್ಯ ಆಗಲಿಲ್ಲ. ಜೀವದ ಹೆದರಿಕೆ! ಎರಡೂ ಕಡೆಗೆ ಸೇರಿ ನಾಲ್ವರು ಮಡಿದ ಬಳಿಕ, ಹನ್ನೆರಡು ಜನರಿಗೆ ಗಾಯಗಳಾದ ನಂತರ, ಬೀದಿಯು ಮನುಷ್ಯರ ರಕ್ತದಿಂದ ರಂಜಿತವಾದ ಬಳಿಕ ಎದ್ದ ಯುದ್ಧದ, ವೈಮನಸ್ಯದ ಈ ಬಿರುಗಾಳಿಯು ತನ್ನಷ್ಟಕ್ಕೆ ತಾನೇ ಅರ್ಧಗಂಟೆಯ ನಂತರ ನಿಂತಿತು; ಬೆಂಕಿಯು ಆರಿಹೋಯಿತು ತನ್ನ ಶಕ್ತಿಯನ್ನು ಸಂಪೂರ್ಣವಾಗಿ ತೋರಿಸಿ.

ಆಗ ಕೆಲವರು ಪ್ರತಿಷ್ಠಿತ ಜನರು ಡಾಕ್ಟರರಿಗೂ ಪೋಲೀಸರಿಗೂ ಈ ಜಗಳದ ಸುದ್ದಿಯನ್ನು ತಿಳಿಸಿದರು. ಅವರು ಈ ಓಣಿಗೆ ಬಂದು ನೋಡಿದಾಗ ಇಡೀ ಓಣಿಯು ಹವೆಯಲ್ಲಿ ಬಿಸಿನೆತ್ತರದ ಮತ್ತು ಬೆವರಿನ ನಾತವು ಕೂಡಿರುವುದೆಂದೂ ಕೃಪಾಣಗಳೂ ಕೊಡಲಿಗಳೂ ಚೂರಿಗಳೂ ಸಾಕಷ್ಟು ನೆತ್ತರ ಕುಡಿದಿರುವುವೆಂದೂ ಅವರಿಗೆನಿಸಿತು. ಪಾಲಾಸಿಂಹನು ಆಸ್ಪತ್ರೆಗೆ ಹೋದ ಎರಡೇ ದಿನಗಳಲ್ಲಿ ಪ್ರಾಣಬಿಟ್ಟನು. ಚೌಧರಿ ಹೀರಾಸಿಂಹನೂ ತನ್ನ ಗೆಳೆಯನ ದಾರಿಯನ್ನೇ ಹಿಡಿದನು.

ಅವನ ಮೈತುಂಬೆಲ್ಲ ಅಸಾಧ್ಯ ಗಾಯಗಳಾಗಿದ್ದುವು. ಅರ್ಜುನ ಶರೀರವೂ ಗಾಯಮಯವಾಗಿತ್ತು. ಅವನ ಸಹನಶಕ್ತಿಯೂ ಮಿತಿಮೀರಿದುದಾಗಿತ್ತು. ಎರಡು ಮೂರು ತಿಂಗಳ ನಂತರ ಅಡ್ಡಾಡಲು ಯೋಗ್ಯನಾದನು. ಈ ಜಗಳದ ವಿಚಾರಣೆಯು ಅತ್ಯಂತ ಸೂಕ್ಷ್ಮವಾಗಿ ಆಯಿತು. ಇಷ್ಟು ಸೂಕ್ಷ್ಮವಾಗಿ ಇತರ ಯಾವ ಜಗಳದ ವಿಚಾರಣೆಯೂ ಆಗಿರಲಿಲ್ಲವೆಂದು ಹೇಳುತ್ತಾರೆ. ಪೋಲೀಸ ಠಾಣೆಯವರು ಈ ಊರಿಗೆ ಒಂದು ತಿಂಗಳವರೆಗೆ ಬಂದು ಹೋಗಬೇಕಾಯಿತು. ಪಾಲಾಸಿಂಹನ ಜಮೀನು ನಿಹಾಲಶಹನಲ್ಲಿ ಒತ್ತಿಯಾಗಿದ್ದಿತು. ಎರಡೂ ಕಡೆಯವರಲ್ಲಿ ಕೆಲವರು ಬಿಡಲ್ಪಟ್ಟರು ಮತ್ತು ಕೆಲವರಿಗೆ ಶಿಕ್ಷೆಯಾಯಿತು. ಶಂಘಾರಾಸಿಂಹನಿಗೆ ಐದು ವರ್ಷ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿತು.

## ೨

ಚಳಿಯು ಇನ್ನೂ ತನ್ನ ತಾರುಣ್ಯಾವಸ್ಥೆಯನ್ನು ತಲುಪಿರಲಿಲ್ಲ. ರಾತ್ರಿ ತೀರುತ್ತ ಬಂದಿದೆ, ಸುತ್ತಲೂ ಪಸರಿಸಿದ್ದ ಮಂದ ಬೆಳದಿಂಗಳಲ್ಲಿ ಪೂರ್ವಕ್ಷಿತಿಜದಲ್ಲಿ ಪ್ರಭಾತದ ರಕ್ತವರ್ಣವು ಮೂಡುತ್ತಿದೆ. ಮಂದಮಾರುತನು ಹೊಲಗಳಲ್ಲಿ ಬೆಳೆಯೊಡನೆ ಚಿನ್ನಾಟ-ಸಲುಗೆಯಾಟವನ್ನು ಆಡುತ್ತಿದ್ದಾನೆ. ಎಲ್ಲೆಡೆಯಲ್ಲಿ ಮೌನದೇವಿಯು ತನ್ನ ಸಾಮ್ರಾಜ್ಯವನ್ನು ಬೀರಿದ್ದಾಳೆ. ಅಲ್ಲಲ್ಲಿ ಗಳೆಹೊಡೆದುಕೊಂಡು ಹೋಗುವ ಒಕ್ಕಲಿಗರ ಶಬ್ದವೂ ಎತ್ತಿನ ಗಂಟೆಯ ಶಬ್ದಗಳೂ ಕೇಳಿಬರುತ್ತಿವೆ. ಟಿಟ್ಟಿಭದ ಸವಿಯಾದ ಸ್ವರವೂ ಬರುತ್ತಿದೆ. ಇನ್ನೂ ಊರಲ್ಲಿ ಕೆಲವರು ಮಲಗಿದ್ದಾರೆ. ಆದರೆ ಮುಂಜಾನೆ ಕೆಲವು ಹುಂಜ

ಗಳಲ್ಲಿ ಕಾದಾಟವು ನಡೆದಿದೆ. ಎಷ್ಟೋತ್ತಿನಿಂದ ಅವು ಜೋರಾಗಿ ಕೂಗುತ್ತಿವೆಯೆಂದು ಹೇಳಲು ಬರುವಂತಿಲ್ಲವಾದರೂ ಯಾವವೂ ಸೋಲಲಿಲ್ಲವೆಂಬುದನ್ನು ಹೇಳಬಹುದು.

ಜಲ್ಲೋ-ಕೆಯಿಂದ ಪೇಟೆಗೆ ಹೋಗುವ ಒಂದು ಮಾರ್ಗ ದಲ್ಲಿ ಹತ್ತಿಹೇರಿದ ಒಂದು ಗಾಡಿಯು ಮೆಲ್ಲಮೆಲ್ಲಗೆ ಹೋಗು ತ್ತಿದೆ. ಇಪ್ಪತ್ತೆರಡು ವರ್ಷದ ಒಬ್ಬ ನವಯುವಕ, ತಾರೂ ಎತ್ತುಗಳನ್ನು ಹೊಡೆಯುತ್ತಾ ಇದ್ದಾನೆ. ಎತ್ತಿನ ಕಾಲು ಗಳು ತಪ್ಪಿಬಿದ್ದರೆ ಒಂದೆರಡು ಬೈದೂಬಿಡುತ್ತಾನೆ, ಬಾಲ ಮುರಿದು, ಬಾರಕೋಲಿನ ಏಟುಕೊಟ್ಟು ವೇಗವಾಗಿ ನಡೆಯಿ ಸುತ್ತಲೂ ಇದ್ದಾನೆ ಆಗಾಗ್ಗೆ ಅಂತಃಪ್ರೇರಣೆಯಿಂದ ಪ್ರೇರಿತ ನಾಗಿ ಜೋರಿನಿಂದ ಒಂದು ತಾನು ಹೊಡೆಯುತ್ತಾನೆ—

ಜಗ್ಗಿಯಾ

ಹಸೀನ ಜವಾನೀ ದಾ ಠಗ್ಗಿಯಾ*

ಅವನ ದನಿಯು ನಿರ್ಜನ ನಿಸ್ತಬ್ಧ ಸಮಯದಲ್ಲಿ-ಸ್ಥಾನ ದಲ್ಲಿ ಮೈಲು ಮೈಲುಗಳವರೆಗೆ ಪ್ರತಿಧ್ವನಿಸಿ ಶಾಂತವಾಗುತ್ತದೆ. ಪ್ರಸಿದ್ಧ ಕಳ್ಳನಾದ ಜಗ್ಗೂನ ಕಾರ್ಯಗಳ ವರ್ಣನೆಯು ಊರಿನ ಪ್ರತಿಯೊಬ್ಬ ಹುಡುಗನ ಬಾಯಲ್ಲಿದೆ.

ಜಗಳ—ಅಲ್ಲ, ಯುದ್ಧವಾದ ಸ್ವಲ್ಪ ದಿನಗಳಲ್ಲೆ ತಾರೂನ ತಾಯಿಯ ದೇಹಾಂತವೂ ಆಗಿಬಿಟ್ಟಿದ್ದಿತು. ಆಕೆಗೆ ರೋಗ ವೇನೂ ಆಗಿರಲಿಲ್ಲವೆಂದು ಹೇಳಬಹುದೊ ಏನೊ. ಏಕೆಂ ದರೆ ದೆವ್ವದ ಕಾಟವೆಂದು ಆಕೆಯನ್ನು ಒಂದು ಕಂಬಕ್ಕೆ ಕಟ್ಟಿ ಫೌಜಸಿಂಹನು ಹೊಡೆದಿದ್ದನು, ಪವಿತ್ರಾಗ್ನಿಯಲ್ಲಿ ಮುಗು

---

* ಓ ಜಗ್ಗೂ, ಸುಂದರ ತಾರುಣ್ಯದಿಂದ ಮೋಸ ಹೋದ ಜಗ್ಗೂ!

ಚುವ ಕೈಯನ್ನು ಕಾಸಿ ಬರೆಯನ್ನೂ ಕೊಡಲಾಗಿತ್ತು. ಅದರಿ ಯಾವ ಲಾಭವೂ ಆಗಿರಲಿಲ್ಲ. ಕೊನೆಗೆ ಬಡಪ್ರಾಣಿಯು ತನ್ನ ಗಂಡನಬಳಿ ಸಾರಿದಳು

ತಾಯಿಯು ಸತ್ತಮೇಲೆ ತಾರೂನ ಕಕ್ಕ ಕಾಲಸಿಂಹನು ಮನೆಯ ಭಾರವನ್ನು ಹೊತ್ತುಕೊಂಡನು. ವ್ಯಾಜ್ಯಕ್ಕೆ ಹೋಗಿ ಉಳಿದ ಭೂಮಿಯ ವ್ಯವಸ್ಥೆಯನ್ನು ಸ್ವತಃ ಮಾಡತೊಡ ಗಿದನು. ಅವನು ಬಹಳ ಚುರುಕಾಗಿದ್ದರಿಂದ ಖರ್ಚುವೆಚ್ಚ ಗಳನ್ನು ಸರಿಪಡಿಸಿಬಿಟ್ಟನು. ಅವನ ಕೈಯಲ್ಲೇ ಎಲ್ಲ ಭೂಮಿ ಯಿದ್ದಂತೆ ಆಗಿಹೋಯಿತು. ತಾರೂನ ಹಕ್ಕು ಒಂದು ಗೇಣು ಭೂಮಿಯ ಮೇಲೂ ಉಳಿಯಲಿಲ್ಲ, ಅವನಿಗೆ ತನ್ನ ಭೂಮಿ ಯೆಂದು ಹೇಳಿಕೊಳ್ಳುವುದಕ್ಕೆ.

ತಾರುವಿನ ತಂದೆತಾಯಿ ತೀರಿಕೊಂಡ ಬಳಿಕ, ತಾರುವಿಗೆ ಎಲ್ಲವೂ ತಿಳಿಯಲಾರಂಭಿಸಿದ ಬಳಿಕ ಹಳ್ಳಿಯ ಉಳಿದ ಹುಡುಗರಂತೆ ದನಕಾಯುವ ಕೆಲಸವೂ ಅವನಿಗೆ ಕೊಡಲ್ಪ ಟ್ಟಿತು. ಉಳಿದ ಹುಡುಗರಂತೆ ಅವನೂ ದಿನಾಲು ಮುಂಜಾನೆ ಗೋವಿನಜೋಳದ ರೊಟ್ಟಿ ಮತ್ತು ಲಸ್ಸಿಯ ನ್ಯಾರಿಯನ್ನು ಮಾಡಿಕೊಂಡು ದನಗಳನ್ನು ಮೇಯಿಸಿಕೊಂಡು ಬರಲು ಹೊರಡುತ್ತಿದ್ದ ಮತ್ತು ಹೋಗುವಾಗ ಒಂದು ರೊಟ್ಟಿಯ ಗಂಟನ್ನೂ ಕಟ್ಟಿಕೊಂಡು ಹೋಗುತ್ತಿದ್ದ. ತಿರುಗಿ ಸಾಯಂಕಾಲ ಗೋಧೂಳಿಯ ಸಮಯಕ್ಕೆ ಮನೆಗೆ ಬರುತ್ತಿದ್ದ. ದನಕಾಯು ವವರ ಒಂದು ಜಾತಿಯೆ ಬೇರೆಯಾಗಿರುತ್ತದೆ. ಆ ಜಾತಿಯ ಗುಣಗಳೂ ವಿಶಿಷ್ಟವಾಗಿರುತ್ತವೆ. ತಾರುವಿನ ಆಕಳುಗಳು, ಎಮ್ಮೆಗಳು ತಿರುಗಿ ಮನೆಗೆ ಬರುವಾಗ ದಾರಿಯ ಅಕ್ಕಪಕ್ಕದ

ಹೊಲಗಳನ್ನು ಹೊಕ್ಕು ಬೆಳೆಯನ್ನು ತಿನ್ನುತ್ತಿದ್ದವು. ಆದುದ ರಿಂದ ಅವನು ಅನೇಕ ಬೈಗಳಿಗೂ ಗುರಿಯಾಗಬೇಕಾಗುತ್ತಿದ್ದಿತು. ಕೆಲವು ಆಧುನಿಕ ( modern ) ಬೈಗಳುಗಳನ್ನೂ ಅವನು ಕಲಿತುಕೊಳ್ಳುವುದರಲ್ಲಿ ತನ್ನ ಆಶ್ಚರ್ಯಕಾರಕ ಪ್ರತಿಭೆ ಯನ್ನೂ ತೋರ್ಪಡಿಸಿದ. ಮಧ್ಯಾಹ್ನ ದನಕರುಗಳಿಗೆ ನೀರು ಕುಡಿಸಿ, ಅವು ನೆರಳಿನಲ್ಲಿ ಮಲಗಿಕೊಂಡಾಗ ಉಳಿದ ದನ ಕಾಯುವ ಹುಡುಗರ ಕೂಡ ಆಟವಾಡುತ್ತಿದ್ದ, ಮತ್ತು ಆಗಾಗ್ಗೆ ರಸ್ತೆಯಿಂದ ಪಟ್ಟಣಕ್ಕೆ ಹೋಗುವ ಲಾರಿಗಳನ್ನು ಮರ ವೇರಿ ನೋಡುತ್ತಿದ್ದ ಆಸೆಯ ನೋಟದಿಂದ. ಮತ್ತು ಮನ ದಲ್ಲಿ ತಾನು ದೊಡ್ಡವನಾದ ಮೇಲೆ ಒಂದು ಗುಂಪು ಕಟ್ಟಿಕೊಂಡು ಹೇಗೆ ದರೋಡೆ ಮಾಡಬೇಕೆಂದು ಯೋಚಿಸುತ್ತಿದ್ದ. ಬಳಿಕ ಹಾಕೂನಬಗ್ಗೆ ಪ್ರಸಿದ್ಧವಿದ್ದ ಹಾಡನ್ನು ಹಾಡುತ್ತಿದ್ದ. ಹಾಕೂ ಒಬ್ಬ ದೊಡ್ಡ ದರೋಡೆಗಾರ, ಜಾತಿಯಿಂದ ಜಾಟ. ಅವನಿಗೆ ಒಮ್ಮೆ ದರೋಡೆಯ ಅಪರಾಧಕ್ಕಾಗಿ ನಾಲ್ಕು ವರ್ಷ ಕಠಿನ ಶಿಕ್ಷೆಯೂ ಆಗಿದ್ದಿತು. ಅವನು ಮರದ ಮೇಲೆ ಕುಳಿತು ಕೊಂಡು--

ಹಾಕೂ

ಡಾಂಗಾ ನ ಮಾರೀ
ಸಿರ ಪಾಟೂ;
ಹಾಕೂ ಜಟದಾ ರಂಗೀಲ ಗಡಾಸಾ, ಬಾಬು ಆ ಭಾಲದಾ ಫಿರೆ

ಅಡಿಯಾ

ಡಾಂಗಾ ನ ಮಾರೀ

ಘಿರೆ ಘಡಿಯಾ*

ಎಂದು ಹಾಡಿದ ಅವನ ಸ್ವರವು ಬಹುದೂರದ ವರೆಗೆ ಹೊಲಗಳಲ್ಲಿ ಪ್ರತಿಧ್ವನಿತವಾಗುತ್ತಿದ್ದಿತು.

ಚಿಕ್ಕಂದನ್ನು ಕಳೆದು ತಾರೂ ತಾರುಣ್ಯದಲ್ಲಿ ಕಾಲಿಟ್ಟ ಬಳಿಕ ಚಿಕ್ಕಪ್ಪನ ಮತ್ತು ಚಿಕ್ಕಪ್ಪನ ಮಗನ ಕೂಡ ಹೊಲಕ್ಕೆ ಹೋಗಿ ನೇಗಿಲು ನಡೆಯಿಸತೊಡಗಿದ. ಅಲ್ಲದೆ ಎತ್ತಿನಗಾಡಿಗಳನ್ನು ಹೊಡೆದುಕೊಂಡು ಹೋಗುವ ಕಾರ್ಯದಲ್ಲೂ ನೆರವಾಗತೊಡಗಿದ. ಚಿಕ್ಕಪ್ಪನ ವಿಷಯದಲ್ಲಿ ಅವನಿಗೆ ಪೂಜ್ಯಭಾವನೆಯಿತ್ತು, ತಂದೆಯಂತೆ ಅವನನ್ನು ಕಾಣುತ್ತಿದ್ದ. ಆದರೆ ಚಿಕ್ಕಮ್ಮನ ವಿಷಯದಲ್ಲಿ ಅವನಿಗೆ ಅಷ್ಟೊಂದು ಪೂಜ್ಯಭಾವನೆಯಿರಲಿಲ್ಲ. ಏಕೆಂದರೆ ಅವಳು ತನ್ನನ್ನು ತನ್ನ ಮಗನಂತೆ ಕಾಣುವುದಿಲ್ಲ, ಹಾಲು ಕೊಡಬೇಕಾದರೆ ಕೆನೆಯನ್ನು ಹಿಂದಕ್ಕೆ ಸರಿಸಿ ಕೊಡುವಳು, ಚೆನ್ನಾದ ರೊಟ್ಟಿಯನ್ನು ಕೊಡುವುದಿಲ್ಲ ಎಂದು ಆತನಿಗೆ ಸಂಶಯ. ಆದರೆ ಈ ಮಾತನ್ನು ಅವನು ತನ್ನ ಚಿಕ್ಕಪ್ಪನಿಗೆ ಎಂದೂ ಹೇಳಲಿಲ್ಲ.

ಈಗ ತಾರುವಿನ ಮೈಕಟ್ಟು ಬಹು ಸುಂದರವೂ ಸುಘಟಿತವೂ ಆದುದಾಗಿದ್ದಿತು ಭುಜಗಳು ಬಲವಾಗಿದ್ದುವು, ಎದೆಯು ಹರವಾಗಿದ್ದಿತು. ಎತ್ತರವು ಬೆಳೆದಿದ್ದಿತು. ಮೈಬಣ್ಣ ಕೆಂಪು, ತುಂಬಿದ ಗಲ್ಲಗಳು. ವ್ಯಕ್ತಿತ್ವವು ಮೈವೆತ್ತು ನಿಂತಂತಿದ್ದಿತು. ವಯಸ್ಸಿನ ದೃಷ್ಟಿಯಿಂದ ಈಗ ಅವನಿಗೆ ಕರ್ತಾರ

---

* ಹಾಕೂ, ನೀನು ದೊಣ್ಣೆಗಳಿಂದ ಹೊಡೆಯಬೇಡ—ತಲೆ ಒಡೆಯುವುದು. ಹಾಕೂ ಜಾಟನ ಮಂಡಳಿಯು ಬಾಬುಗಳನ್ನು ಹುಡುಕುತ್ತ ತಿರುಗುತ್ತದೆ. ಹಾಕೂ, ದೊಣ್ಣೆಯಿಂದ ಹೊಡೆಯಬೇಡ, ಎಲ್ಲಾದರೂ ಸಿಕ್ಕ ಒದ್ದಾಡೀಯಾ.

ಸಿಂಹನೆಂದೊ ತಾರಾಸಿಂಹನೆಂದೊ ನಾವು ಕರೆಯುವುದು ವಿಹಿತ. ಆದರೆ ಎಲ್ಲರೂ ಅವನನ್ನು ಮೊದಲಿನಂತೆಯೆ 'ತಾರೂ' ಎಂದೇ ಕರೆಯುತ್ತಾರೆ. ಮತ್ತೇನು ಮಾಡುವುದು ? ನಾವೂ ಮೊದಲಿನಂತೆಯೆ ಕರೆಯೋಣ 'ತಾರೂ' ಎಂದು. ತಾರೂ ಉಳಿದ ಹುಡುಗರಿಗಿಂತಲೂ ಸ್ವಲ್ಪ ಹೆಚ್ಚು ರಸಿಕ. ಬಂಗಾರದ ಎರಡು ಹಲ್ಲುಗಳನ್ನು ಕೂಡಿಸಿಕೊಂಡಿದ್ದಾನೆ. ಬಲಭುಜದ ಮೇಲೆ ನೀಲಿ ಬಣ್ಣದಲ್ಲಿ ಒಬ್ಬ ಹೆಂಗುಸಿನ ಮುಖವನ್ನೂ ಎರಡು ಕೂಡಿದ ಕೈಗಳನ್ನೂ ಹಚ್ಚೆ ಚುಚ್ಚಿಸಿಕೊಂಡಿದ್ದಾನೆ. ಅದೇ ಬಣ್ಣದಿಂದ ಎಡ ಮಣಿಕಟ್ಟಿನ ಮೇಲೆ ಒಂದು ಹೂವನ್ನೂ ತನ್ನ ಹೆಸರನ್ನೂ ಚುಚ್ಚಿಸಿಕೊಂಡಿದ್ದಾನೆ. ಅವನು ಸಾಧಾರಣವಾಗಿ ರೇಶ್ಮೆಯ ಶರ್ಟನ್ನೂ ಜೋಗಿಯಾ ಬಣ್ಣದ ಚಲ್ಲಣವನ್ನೂ ಧರಿಸುತ್ತಾನೆ. ಸಮಯ ಸಿಕ್ಕಾಗ ಊರಿನ ನವಯುವತಿಯರನ್ನೂ ಸ್ವಲ್ಪ ತಡವುತ್ತಾನೆ. ಜನರಿಗೆ ಇವನ ಚಾರಿತ್ರ್ಯದ ವಿಷಯವಾಗಿ ಸ್ವಲ್ಪ ಸಂಶಯ. ಎಷ್ಟೋ ಸಾರಿ ಈ ದೂರು ಅವನ ಚಿಕ್ಕಪ್ಪನ ಕಿವಿಯ ವರೆಗೂ ಹೋಗಿ ಮುಟ್ಟಿದೆ. ಆದರೆ ಅವರು ಅತ್ತ ಅಷ್ಟು ಗಮನಕೊಟ್ಟಿಲ್ಲ, ತನ್ನ ಅಣ್ಣಂದಿರನ್ನು ನೆನೆಯಿಸಿಕೊಂಡು 'ಇನ್ನೂ ಹುಡುಗ, ಮುಂದೆ ತಾನೇ ತಿಳಿವಳಿಕೆ ಬರುವುದು' ಎಂದು ದೂರು ಹೇಳಿದವರ ಬಾಯಿ ಕಟ್ಟಿಬಿಟ್ಟಿದ್ದಾರೆ.

ಈಗ ಗೋಧೂಳಿಯ ಸಮಯ. ಸಂಧ್ಯಾರಮಣಿಯು ನಮ್ಮ ಮೇಲೇರಿ ಬರುತ್ತಿದಾಳೆ. ತಾರೂ ಹತ್ತಿಯನ್ನು ಮಾರಿ ತಿರುಗಿ ಬರುತ್ತಿದಾನೆ. ದಲಾಲಿ, ಜಕಾತಿ (ಸುಂಕ) ಎಲ್ಲಾ ಕೊಟ್ಟಬಳಿಕ ಹತ್ತಿಗೆ ಅರವತ್ತು ರೂಪಾಯಿಗಳು

ದೊರೆತಿವೆ. ಚಕ್ಕಡಿಯಲ್ಲಿ ಒಂದಿಷ್ಟು ಕಬ್ಬಿನ ಗಳ, ಒಂದೆರಡು ಕೋಸುಗಡ್ಡೆ, ಒಂದು ಗ್ಲಾಸು, ಒಂದು ಸಾರಾಯಿಯ ಬಾಟಲಿ ಬರಿದಾದುದು ಇವೆ. ಈಗ ಅವನು ಹಾಡುತ್ತಿಲ್ಲ, ಸುಮ್ಮಗಿದ್ದಾನೆ—ವ್ಯಾಪಾರ ಮಾಡಿಕೊಂಡು ಬರುತ್ತಿದ್ದಾನೆ, ರೂಪಾಯಿ ಇವೆ ಬಳಿಯಲ್ಲಿ.

೩

ಈಗ ಬನಸೋ ತನ್ನ ತವರುಮನೆಗೆ ಬಂದು ಒಂದು ವರ್ಷವಾಗುತ್ತ ಬಂದಿತ್ತು. ಆಕೆಯ ಗಂಡ ಆಕೆಯನ್ನು ಮೂರ-ನಾಲ್ಕು ಬಾರಿ ಕರೆಯಲು ಬಂದ, ಆದರೆ ಆಕೆಗೆ ಹೋಗುವ ಇಚ್ಛೆಯೆ ಇಲ್ಲ ಮಾವನ ಮನೆಗೆ. ಆಕೆಯ ತಂದೆಯು ದೇಹಾಂತ ಯಾವಾಗೋ ಆಗಿಬಿಟ್ಟಿತ್ತು. ತಂದೆತಾಯಿಂದಿರ ಏಕಮಾತ್ರ ಪುತ್ರಿಯಾಗಿದ್ದುದರಿಂದಲೂ ಮನೆಯವರ ಕಣ್ಣಮಣಿಯಾಗಿದ್ದುದರಿಂದಲೂ ಒಂದೇ ಬಾರಿ ಅತ್ತೆಯಮನೆಯನ್ನು ಕಂಡುಬಂದುದರಿಂದಲೂ ಇಷ್ಟುಬೇಗ ಪುನಃ ಅತ್ತೆಯ ಮನೆಗೆ ಕಳಿಸುವುದೆನ್ನಿರಿ ಅಥವಾ ಹೋಗುವುದೆನ್ನಿರಿ ಮನೆಗೆ ಭೂಷಣವಲ್ಲವೆಂದು ಆಕೆಯದೂ ಆಕೆಯ ತಾಯಿಯದೂ ಅಭಿಪ್ರಾಯ.

ಬನಸೋ ಉದಿತೋದಿತ ತಾರುಣ್ಯದಿಂದಲೇ ಚಂಚಲೆಯು. ಆಕೆಯ ಸರಳ, ನೈಸರ್ಗಿಕ ಸೌಂದರ್ಯಕ್ಕೆ ಪಟ್ಟಣದ ಫೇಸ ಪೌಡರ, ಸ್ನೋ ಬೇಕಾಗಿರಲಿಲ್ಲ. ಬಯಲು ಹವೆ, ಮನೆಗೆಲಸ ಇವುಗಳು ಆಕೆಯ ಬಣ್ಣಕ್ಕೆ ಮೆರುಗು ಕೊಟ್ಟಿದ್ದವು, ಆಕೆಯ ಮೈಯನ್ನು ಸುಂದರವಾದ ಅಚ್ಚಿನಲ್ಲಿ ಹಾಕಿ ಹೊರಕ್ಕೆ ತೆಗೆದಿದ್ದವು ! ಈಗ ಆಕೆಯ ತುಂಬಿದ ತಾರುಣ್ಯವು ಕುಣಿ

ಕುಣಿದು ನಲಿಯುತ್ತಿದ್ದಿತು. ಆಕೆಯ ಸೌಂದರ್ಯವು ಪ್ರಳಯ ವನ್ನೆ ಎಬ್ಬಿಸುವಂತಿದ್ದಿತು. ಆಕೆಯ ತುಂಬಿದ ಗುಂಡಾದ ಭುಜಗಳು, ಎದೆಗಳು ಸಾಧಾರಣವಾದ ಹಳ್ಳಿಗರ ಒಟ್ಟೆಯು ಳ್ಳಿರಲು ಒಲ್ಲೆನ್ನುವಂತಿದ್ದುವು. ಆಕೆಯನ್ನು ನೋಡಿ ತರು ಣರು ಬಾಯಿಬಿಡುತ್ತಿದ್ದರು, ಅವರ ಬಾಯಿಗಳು ನೀರೊಡೆಯು ತ್ತಿದ್ದುವು ಎಷ್ಟೋ ಯುವಕರು ಆಕೆಯನ್ನು ಓಡಿಸಿಕೊಂಡು ಹೋಗಲು ಹೊಂಚುಹಾಕುತ್ತಿದ್ದರು. ಆದರೆ ಆಕೆಯ ತಾಯಿ ಬಹು ಬುದ್ಧಿವಂತಿ. ಆದ್ದರಿಂದ ಆಕೆಯ ಎದುರಿನಲ್ಲಿ ಯಾರ ಆಟವೂ ನಡೆಯುತ್ತಿರಲಿಲ್ಲ ಆದ್ದರಿಂದ ಬನಸೋನ ರೆಕಾರ್ಡು ಚೆನ್ನಾಗಿದ್ದಿತೆಂದು ಹೇಳಬಹುದು. ಹೌದು, ಒಂದು ಬಾರಿ ಯಾರೋ ಒಬ್ಬರು ಆಕೆಯು ಪಾಠಶಾಲೆಯ ಒರ್ವ ಅಧ್ಯಾ ಪಕನ ಕೂಡ ನಗೆಯಾಡುತ್ತಿರುವುದನ್ನು ಕಂಡರು. ಕೇಳುವು ದೇನು ? ಊರಲ್ಲೆ ಸುದ್ದಿ ಕಾಡ್ಗಿಚ್ಚಿನಂತೆ ಹಬ್ಬಿತು. ಊರಿನ ಕೆಲವರು ಯುವಕರು ಅಧ್ಯಾಪಕನನ್ನು ರಾತ್ರಿಯಲ್ಲಿ ನಾಲಿಯ ಅಂಗಳದಲ್ಲಿ ಚೆನ್ನಾಗಿ ತಿದ್ದಿದರು. ತತ್ಪರಿಣಾಮವಾಗಿ ಡಾಕ್ಟರ ರಶೀದರು ಅಲ್ಲಿಗೆ ಬರಬೇಕಾಯಿತು. ಅವರ ಫಜೀತಿ ಅಷ್ಟಿಷ್ಟು ಆಯಿತೆಂದು ಹೇಳಲಾಸಲ್ಲ. ಅಂದಿನಿಂದ ಅಧ್ಯಾ ಪಕರು ಆ ಊರಲ್ಲಿ ಯಾರ ಕಣ್ಣಿಗೂ ಕಾಣಿಸಿಲ್ಲ.

ಬನಸೋನ ಸಹವಾಸ-ಸುಖಾಪೇಕ್ಷೆಗಳಿಗಾಗಿ ಎಷ್ಟೋ ಜನ ಬಂದರು. ಆದರೆ ಬನಸೋನ ತಾಯಿಗೆ ತನ್ನ ಮಗಳ ರೂಪ-ಲಾವಣ್ಯಗಳ ಬೆಲೆ ಚೆನ್ನಾಗಿ ಗೊತ್ತಿದ್ದಿತು. ಆದ್ದ ರಿಂದ ಆಕೆ ಬಿಗಿಹಿಡಿದಿದ್ದಳು, ಯಾರಿಗೂ ವಚನ ಕೊಟ್ಟಿರ ಲಿಲ್ಲ. ಆಕೆಯು ಒಂದು ದೊಡ್ಡ ಬೇಟೆಯಾಡಬೇಕೆಂ ದಿದ್ದಳು. ಯಾರು ಎಲ್ಲರಿಗಿಂತ ಹೆಚ್ಚು ಕಾಂಚನವನ್ನು ಕೊಡು

ವರೋ ಅವರಿಗೆ ತನ್ನ ಮಗಳನ್ನು ಕೊಡಬೇಕೆಂದು ಆಕೆಯ ಆಕಾಂಕ್ಷೆ. ತಾರೂ ಯಾವಾಗ ಆಕೆಯ ಮನೆಯ ಮುಂದಿಂದ ಹಾಯುತ್ತಿದ್ದನೊ ಆಗ ಅವನ ಮೀಸೆಯು ಕೂಡಿ ಇನ್ನಿಷ್ಟು ಮೊನಚಾಗುತ್ತಿದ್ದಿತು; ಅವನ ವಸ್ತ್ರಗಳು ಹೆಚ್ಚಾಗಿ ಗಾಳಿಯಲ್ಲಿ ಹಾರಾಡಿ ಮೆರೆಯುತ್ತಿದ್ದುವು. ಬನಸೋನ ಕಣ್ಣುಗಳೂ ಕೊಂಚ ಮಿಲಿತವಾಗುತ್ತಿದ್ದುವು, ಆಕೆಯ ತುಟಿಗಳೂ ಒಂದೊಂದು ಸಲ ಸ್ವಲ್ಪ ಹಿಗ್ಗುತ್ತಿದ್ದುವು. ಆದರೆ ತಾರೂ ತನಗೆ ಬನಸೋ ದೊರೆಯಳೆಂದು ಚೆನ್ನಾಗಿ ಅರಿತಿದ್ದ, ಏಕೆಂದರೆ ಅವನು ಪರಾಧೀನ, ಬಡವ.

ಶಂಘಾರೂ ಕಾರಾಗೃಹದಿಂದ ಬಿಟ್ಟುಬಂದ ಬಳಿಕ ತನ್ನ ಹೊಸ ಭೂಮಿ-ಕಾಣಿಯಿದ್ದಲ್ಲಿಗೆ ಮಕ್ಕಳುಮರಿಗಳೊಡನೆ ಹೋದ. ಅಲ್ಲಿ ಅವನ ಕೆಲಸವೂ ಚೆನ್ನಾಗಿ ನಡೆದಿದ್ದಿತು. ಅವನ ಹಿರಿಯ ಮಗ ಹಜಾರೂ ತಾರುವಿನಷ್ಟೇ ವಯಸ್ಸಿನವನಾಗಿದ್ದ. ಆಗಾಗ್ಗೆ ತಂದೆ ಮತ್ತು ಮಗ ಇಬ್ಬರೂ ಈ ಹಳ್ಳಿಗೆ ಬರುತ್ತಿದ್ದರು. ಒಂದು ದಿನ ಶಂಘಾರೂ ತನ್ನ ಮಗನಿಗೆ ಬನಸೋನನ್ನು ಬೇಡಿದ. ಮಾತುಕತೆಗಳು ಆದುವು. ಹನ್ನೆರಡು ನೂರು ರೂಪಾಯಿಗಳಿಗೆ ವ್ಯಾಪಾರವು ಆಗಿ ಹೋಯಿತು. ತಾರುವಿಗೆ ಈ ಸುದ್ದಿಯು ತಿಳಿಯಿತು. ಅವನಿಗೆ ತನ್ನ ಎದೆಯ ಮೇಲೆ ನೂರಾರು ಸರ್ಪಗಳು ಆಡುತ್ತಿರುವಂತೆ ಎನಿಸಿತು; ತನ್ನ ಎದೆಯಲ್ಲಿ ಕಬ್ಬಿಣದ ಮೊಳೆಯನ್ನು ಹೊಡೆದಂತೆ ಎನಿಸಿತು.

ಬನಸೋ ಯಾವ ಕೆಟ್ಟ ಮುಹೂರ್ತದಲ್ಲಿ ಗಂಡನ ಮನೆಯಲ್ಲಿ ಕಾಲಿಟ್ಟಳೋ ಏನೊ, ಅಸಂತೋಷದ ಅಗ್ನಿಯೆ ಹೊತ್ತಿತು. ಆಕೆಯ ತಾಯಿಯ ಅತ್ಯಾಸೆಯಿಂದ ಎಲ್ಲರೂ

ಮನಸೊಂದಿದ್ದರು, ಹನ್ನೆರಡುನೂರು ' ಈಕೆಗೆ ಎಲ್ಲೆಮೀರಿದ ಶುಲ್ಕ ಎಂದು ತಿಳಿದಿದ್ದರು. ಒಂದು ದಿನ ಹಜಾರೂ ಅಧ್ಯಾಪಕರ ಮಾತನ್ನೆತ್ತಿ "ನೀನೇನು? ಬಹಳ ಬುದ್ಧಿವಂತಿ, ವಿದುಷಿ. ಅಧ್ಯಾಪಕನ ಚರಣಸನ್ನಿಧಿಯಲ್ಲಿದ್ದವಳು!" ಎಂದು ವ್ಯಂಗ್ಯವಾಗಿ ಬನಸೋಗೆ ಎಂದಿದ್ದ. ಬನಸೋನ ತಾಯಿಯನ್ನು ಕುರಿತೂ ಆಡಬಾರದ ಮಾತುಗಳನ್ನಾಡಿದ್ದ. ಬನಸೋ ಹಾಗೂ ಹೀಗೂ ಅತ್ತೆಮನೆಯಲ್ಲಿ ಸ್ವಲ್ಪ ದಿನಗಳನ್ನು ದೂಡಿದಳು. ತಾಯಿಯು ಬಂದು ಕರೆದುಕೊಂಡು ತವರಿಗೆ ಬಂದಾಗ ಬನಸೋ ಗುರುಮಹಾರಾಜ (ಗುರು ನಾನಕ)ನನ್ನು ವಂದಿಸಿ ಧನ್ಯವಾದಗಳನ್ನಿತ್ತಳು—ಅತ್ತೆಮನೆಯಿಂದ ಪಾರಾದೆನಲ್ಲಾ ಎಂದು!

ಈಗ ಬನಸೋಗೆ ತನ್ನ ತವರುಮನೆಗೆ ಬಂದು ಒಂದು ವರ್ಷವಾಗುತ್ತ ಬಂದಿತ್ತು. ಕೆಲವು ತಿಂಗಳಿಂದ ತಾರೂ ಈಕೆಯ ಮನೆಗೆ ಬರುತ್ತಲೂ ಹೋಗುತ್ತಲೂ ಇದಾನೆ. ಮೊದಮೊದಲು ಬನಸೋ ಹೇಳಿದರೆ ಆಗಾಗ್ಗೆ ಬಂದು ಎಮ್ಮೆಯನ್ನು ಕರೆದುಕೊಟ್ಟು ಹೋಗುತ್ತಿದ್ದ, ಹೊರಗಿಂದಲೇ ಕಟ್ಟಿಗೆಗಳನ್ನು ಹಾಕಿ ಹೋಗುತ್ತಿದ್ದ. ಇಂಥ ಸೇವೆಗಾಗಿ ಬನಸೋನ ತಾಯಿ "ಮಗೂ, ಹಾಲು ಕುಡಿದು ಹೋಗು" ಎಂದು ಹಾಲುಕೊಟ್ಟರೆ ಹಾಲನ್ನೂ ಅವನು ಕುಡಿದು ಹೋಗುತ್ತಿದ್ದ. ಆ ಮೇಲೆ ಅವರು ತಮ್ಮ ರಕ್ಷಣೆಗಾಗಿ 'ನೀನು ನಮ್ಮ ಮನೆಯಲ್ಲಿ ರಾತ್ರಿಯಲ್ಲಿರುವುದು ಅವಶ್ಯ' ಎಂದು ಹೇಳಿದರೆ ಆಗಾಗ್ಗೆ ರಾತ್ರಿಯನ್ನು ಅವನು ಅವರ ಮನೆಯಲ್ಲಿ ಕಳೆಯುತ್ತಿದ್ದ. ಎಂದಿನಿಂದ ತಾರು ತಮ್ಮ ಮನೆಗೆ ಬಂದು ಹೋಗಿ ಮಾಡಲಾರಂಭಿಸಿದನೊ ಅಂದಿನಿಂದಲೇ ಬನಸೋ

ತನ್ನ ಪತಿಯನ್ನೂ ಅತ್ತೆಯ ಮನೆಯನ್ನೂ ಉಪೇಕ್ಷಿಸುತ್ತಿದಾಳೆ. ಹಜಾರು ಮೂರು ನಾಲ್ಕು ಸಲ ಕರೆಯಲು ಬಂದರೂ ತಾಯಿಮಕ್ಕಳೂ ಇಲ್ಲದುದೊಂದು ನೆಪ ಹೇಳಿ ಅವನನ್ನು ತಿರುಗಿ ಕಳಿಸುತ್ತಿದ್ದರು. ಕೊನೆಗೆ ಒಂದು ಸಲ ಹಜಾರು ಗಟ್ಟಿಗೆ ಹಚ್ಚಿದಾಗ ಆಕೆಯು 'ಬರುವುದಿಲ್ಲ ನಾನು'ಎಂದು ಸ್ಪಷ್ಟವಾಗಿ ಹೇಳಿಬಿಟ್ಟಳು.

ಈಗ ಒಂದು ಸುದ್ದಿ ಹರಡಿದೆ—ಬನಸೋನನ್ನು ಬಲಾತ್ಕಾರಪೂರ್ವಕವಾಗಿ ಕರೆದೊಯ್ಯಲು ಹಜಾರು ಬರುತ್ತಿರುವನೆಂದು. ಆದ್ದರಿಂದ ಬನಸೋನ ತಾಯಿ ತಾರೂನನ್ನು ಕರೆಕಳುಹಿಸಿ ಅವನಿಗೆ ಹೇಳಿದಳು "ನೀನು ಹಜಾರೂನನ್ನು ನಮ್ಮ ಮಾರ್ಗದಿಂದ ಕಿತ್ತು ಹಾಕಿದರೆ ಬನಸೋ ನಿನ್ನವಳೇ ಆಗುವಳು" ಎಂದು.

೪

ಡಿಸೆಂಬರದ ರಾತ್ರಿ. ಹಜಾರೂ ಬಂದು ಮೂರು-ನಾಲ್ಕು ದಿನಗಳು ಆಗಿಹೋಗಿವೆ. ಈ ಸಲ ತಾಯಿಯೂ ಮಗಳೂ ಸೇರಿ ಅವನು ಬೇಡವೆಂದರೂ ಅವನ ಆದರಾತಿಥ್ಯವನ್ನು ವಿಶೇಷವಾಗಿ ಮಾಡಿದರು. ಬನಸೋನ ತಾಯಿ ಎಂದಳು, "ಸ್ವಲ್ಪ ಬನಸೋ ಹೊರಡಬೇಕಾದರೆ ಹಾಗೆಯೆ ಆಕೆಯನ್ನು ಕಳಿಸುವುದೇ? ಸ್ವಲ್ಪ ತಯಾರಿ ಮಾಡಬೇಕು. ಬಳಿಕ ನಿನ್ನ ಜೊತೆಯಲ್ಲೇ ಕಳಿಸುವೆನು. ಹೆಣ್ಣುಮಕ್ಕಳು ಒಂದಿಲ್ಲೊಂದು ದಿನ ಅತ್ತೆಯಮನೆಗೆ ಹೋಗಲೇಬೇಕು."

ಹಜಾರೂ ತಿರುಗಾಡಿ ಕತ್ತಲಾದ ಮೇಲೆ ಮನೆಗೆ ಬಂದ. ಊಟ ತೀರಿಸಿಕೊಂಡು ಮಲಗುವ ಮನೆಗೆ ಹೋದ. ಮಲ

ಗುವ ಮನೆಗೆ ಬಾಗಿಲು ಅಂಗಳಕ್ಕೆ ತಾಗಿದ್ದಿತು. ಮಲ ಗುವ ಕೋಣೆಯಲ್ಲಿ ಒಂದು ಮಂದಪ್ರಕಾಶದ ದೀಪವು ಇದ್ದಿತು, ಬನಸೋನ ಮತ್ತು ಹಜಾರೂನ ಪಲ್ಲಂಗಗಳ ಮೇಲೆ ಸಸುಬೆಳಕನ್ನು ಬೀರುತ್ತಿದ್ದಿತು. ಮಗ್ಗುಲಿನ ಒಂದು ಕೋಣೆ ಯಲ್ಲಿ ಅತ್ತೆಯು ಎಂದರೆ ಬನಸೋನ ತಾಯಿಯು ಮಂಚ ವಿದ್ದಿತು.

ಹಜಾರೂ ಬನಸೋ ಇಬ್ಬರೂ ಮಾತನಾಡುತ್ತ ಕುಳಿ ತಿದ್ದಾರೆ; ರಾತ್ರಿ ಬಹಳವಾಗಿಹೋಗಿದೆ. ಬನಸೋ ಪವಡಿಸುವ ಪೂರ್ವದಲ್ಲಿ ಅಂಗಳಕ್ಕೆ ಹೋಗಿ, ತಾಯಿಯ ಬಳಿಯಲ್ಲಿಯ ಮನೆಗೆ ಹೋಗಿ ತಾರೂ ಅಡಗಿ ನಿಂತುದನ್ನು ನೋಡಿದಳು. ಅವನನ್ನು ಅಪ್ಪಿಕೊಂಡು "ಈ ದಿನ ಕೆಲಸವು ಆಗಲೇ ಬೇಕು." ಎಂದಳು. ತಾರುವಿಗೆ ಮೈಯಲ್ಲಿ ಮಿಂಚು ಸಂಚರಿಸಿದಂತಾ ಯಿತು; ಆದರೆ ಅವನು ಸುಮ್ಮಗಿದ್ದ.

ಬನಸೋ ಹೊರಗೆ ಬಂದು ಸ್ವಲ್ಪ ನಿಮಿಷಗಳು ಮಾತ್ರ ಆಗಿ ದ್ದುವು. ಈಗ್ಗ ಅವಳು ತನ್ನ ಕಿವಿಯ ಆಭರಣಗಳನ್ನು ತೆಗೆದು ಮಂಚದ ಮೇಲೊಂದು ಬದಿಗೆ ಇರಿಸಿ, ಮೇಲುಪ್ಪರಿಗೆಯನ್ನು ಮಡಿಸಿ ದಿಂಬಿನ ಕೆಳಗೆ ಇಟ್ಟು, ಮಲಗುವ ಸಿದ್ಧತೆಯನ್ನು ಮಾಡುತ್ತಿದಾಳೆ; ಇಷ್ಟರಲ್ಲಿ ಆ ಕೋಣೆಯ ಬಾಗಿಲು ತೆರೆ ಯಿತು ಮತ್ತು ಕೂಡಲೆ ಮುಚ್ಚಿತು. ಹಜಾರೂನ ದೃಷ್ಟಿ ಒಬ್ಬ ಯುವಕನ ಮೇಲೆ ಬಿದ್ದಿತು. ಅವನ ಮೂಗು ಕಣ್ಣು ಗಳು ಮಾತ್ರ ಕಂಡುವು, ಉಳಿದ ಶರೀರವೆಲ್ಲ ಆಚ್ಛಾದಿತ ವಾಗಿದ್ದಿತು.

"ಇವರಾರು?" ಎಂದು ಹಜಾರೂ ನುಡಿದ.

"ಅವನೇ ನಿನ್ನನ್ನು ಹುಡುಕುತ್ತಿದ್ದವನು" ಎಂದು ಬನಸೋ ಬಾಗಿಲ ಚಿಲಕವನ್ನು ಹಾಕಿದಳು. ಬನಸೋನ ಬಾಯಿಂದ ಈ ಮಾತು ಹೊರಬೀಳುವಷ್ಟರಲ್ಲಿಯೆ ತಾರೂ ಹಜಾರೂನ ಎದೆಯ ಮೇಲೆ ಕುಳಿತು ಕುತ್ತಿಗೆಯ ಮೇಲೆ ಎರಡು ವಜ್ರದೇಟುಗಳನ್ನು ಹಾಕಿಬಿಟ್ಟಿದ್ದ.

ಕಣ್ಣು ಮುಚ್ಚಿ ತೆಗೆಯುವುದರೊಳಗೆ ಇಷ್ಟು ಆಯಿತು. ಹಜಾರೂ ಮೇಲಕ್ಕೇಳಲು ಪ್ರಯತ್ನಿಸಿದ. ಆದರೆ ಒಳ್ಳೆಯ ಹಿಡಿತದಲ್ಲಿ ಸಿಕ್ಕಿದುದರಿಂದ ಏಳಲಾಗಲಿಲ್ಲ.. ಸ್ವಲ್ಪ ಹೊತ್ತಿನಲ್ಲಿ ಹಜಾರುವಿನ ಹೆಣವು ಕೋಣೆಯಲ್ಲಿ ಬಿದ್ದಿತು.

ತಾರೂ ಹೆಣವನ್ನು ಗಂಟಿನಲ್ಲಿ ಕಟ್ಟಿ ಹೊತ್ತುಕೊಂಡು ತನ್ನ ನಂಬಿಗೆಯ ಗಿದ್ದಡಸಿಂಹನನ್ನು ಸಹಾಯಕ್ಕೆ ಕರೆದುಕೊಂಡು ಹೊಲಕ್ಕೆ ಹೋದನು. ಅಲ್ಲಲ್ಲಿ ಹೆಣವನ್ನು ಚೂರುಚೂರಾಗಿ ಕತ್ತರಿಸಿ ಹತ್ತಿರದ ಕಾಲುಹೊಳೆಯಲ್ಲಿ ಎಸೆದ; ಬಟ್ಟೆಗಳನ್ನು ಸುಟ್ಟು ಭೂಮಿಯಲ್ಲಿ ಹೂಗಿದ; ಎಲ್ಲ ಕೆಲಸ ಮುಗಿಸಿಕೊಂಡು ಬಂದು ಸಂತೋಷದಿಂದ ಮಲಗಿಕೊಂಡ.

ಬೆಳಿಗ್ಗೆ ಬನಸೋ ಹಜಾರೂ ಕೋಪಿಸಿಕೊಂಡು ಹೋಗಿ ಬಿಟ್ಟನೆಂದು ಸುದ್ದಿ ಸಾರಿಬಿಟ್ಟಳು. ಮೂರು ನಾಲ್ಕು ದಿನಗಳ ವರೆಗೆ ಯಾರೂ ಇತ್ತ ಗಮನಕೊಡಲಿಲ್ಲ. ಶಂಭಾರೂ ತನ್ನ ಮಗನನ್ನು ಹುಡುಕುತ್ತ ಬಂದ. ಪೋಲೀಸರಿಗೂ ತನ್ನ ಮಗನ ಪತ್ತೆ ಇಲ್ಲವೆಂದು ತಿಳಿಸಿದ. ಅಲ್ಲಿಗೆ ಹೊಸದಾಗಿ ಒಬ್ಬ ಠಾಣೇದಾರ ಬಂದಿದ್ದ. ಅವನು ಬನಸೋನನ್ನು ಕೇಳಿದ. ಆದರೆ ಅವನು ಕೇಳಿದ ಪ್ರಶ್ನೆಗಳಿಗೆ ಆಕೆಯು ಸರಿಯಾಗಿ ಉತ್ತರವೀಯಲಿಲ್ಲ, ಆಕೆಯ ಮುಖವೂ ವಿವರ್ಣ ವಾಯಿತು. ತಾರೂ ಮತ್ತು ಗಿದ್ದಡಸಿಂಹರನ್ನು ಬಂಧಿಸ

ಲಾಯಿತು. ಗಿದ್ವಡಸಿಂಹನಿಗೆ ಎಲ್ಲವನ್ನೂ ಹೇಳಿದರೆ ಮಾಫಿ ಮಾಡಲಾಗುವುದೆಂದು ಹೇಳಿದ ಕೂಡಲೆ ಅವನು ಎಲ್ಲವನ್ನೂ ಹೇಳಿಯೆ ಬಿಟ್ಟ; ಹುಗಿದ ಬಟ್ಟೆಗಳನ್ನು ತಂದುಕೊಟ್ಟ, ಕಾಲುಹೊಳೆಯನ್ನೂ ತೋರಿಸಿದ; ಆದರಲ್ಲಿಯೂ ಶವದ ಶೋಧನೆ ನಡೆಯಿತು. ಎಷ್ಟೋ ದೂರದಲ್ಲಿ ಹೊಳೆಯ ಕೆಳ ಭಾಗದಲ್ಲಿ ಒಂದು ಕೈಯು ಸಿಕ್ಕಿತು. ಅದರ ಮೇಲೆ ಹಚ್ಚೆ ಚುಚ್ಚಿದ್ದಿತು—ಹಜಾರಸಿಂಹ ವಲ್ದ ಶಂಘಾರೂಸಿಂಹ !

ತಾರುವಿನ ಚಿಕ್ಕಪ್ಪನಿಗೆ ಈ ಸಮಾಚಾರವು ತಿಳಿಯಿತು. ಅವನು ಹಣೆ ಹಣೆ ಗಟ್ಟಿಸಿಕೊಂಡ, ಗಡ್ಡವನ್ನು ಕಿತ್ತುಕೊಂಡ. ವಿಚಾರಣೆ ಒಂದು ವರ್ಷದ ವರೆಗೆ ನಡೆಯಿತು, ಹೈಕೋರ್ಟಿನ ವರೆಗೂ ಅಪೀಲು ಆಯಿತು. ತಾರುವಿನ ಚಿಕ್ಕಪ್ಪನು ಹಣವನ್ನು ಹೊಳೆಯಾಗಿ ಹರಿಸಿ ಪ್ರಯತ್ನಮಾಡಿದನು ತಾರೂನನ್ನು ಉಳಿಸಲು. ಆದರೆ ಎಲ್ಲವೂ ವ್ಯರ್ಥವಾಯಿತು, ಗಲ್ಲಿನ ಶಿಕ್ಷೆಯು ತಪ್ಪಲಿಲ್ಲ. ತಾರೂನ ಚಿಕ್ಕಪ್ಪ ಕಾಲಾಸಿಂಹನು ತಾರೂನ ಕೊನೆಯ ಭೆಟ್ಟಿಯನ್ನು ತೆಗೆದುಕೊಂಡಾಗ ಅವನ ಮುಖ ಕಪ್ಪಾಗಿದ್ದಿತ್ತು, ಗಡ್ಡವೆಲ್ಲ ಬೆಳ್ಳಗಾಗಿದ್ದಿತು; ಅವನ ಕಣ್ಣುಗಳಿಂದ ಕಂಬನಿಗಳು ತಾವಾಗಿ ಉಕ್ಕೇರಿ ಬರುತ್ತಿದ್ದುವು. ಆದರೆ ತಾರೂನ ಮುಖದ ಮೇಲೆ ಸುಖದ ಕಳೆಯೂ ಇರಲಿಲ್ಲ, ದುಃಖದ ಚಿನ್ಹವೂ ಇರಲಿಲ್ಲ. ಅತ್ಯಂತ ಆಳವಾದ ಸಂತೋಷದ ಸಾಗರವು ಅವನ ಮುಖದ ಮೇಲಿರುವುದೋ ಏನೋ ಎಂಬಂತೆ ಕಾಣುತ್ತಿದ್ದ ತಾರೂ.

*　　　*　　　*

ಈಗ ಈ ಸಂಗತಿ ಜರುಗಿ ಬಹಳ ಕಾಲವಾಗಿದ್ದರೂ, ಬನಸೋ ಒಬ್ಬ ಮೋಟಾರ್ ಡ್ರೈವರನ ಕೂಡ ಸಣ್ಣಕ್ಕೆ

ಹೋಗಿದ್ದರೂ, ಪಕ್ಕದ ಹಳ್ಳಿಯ ಸಿಳ್ಳಯುವ ಹು[illegible] ಯಾವನಾದರೂ ಒಬ್ಬನು ದನಗಳನ್ನು ಹೊಡೆದುಕೊಂಡು ತಿರುಗಿ ಬರುವಾಗ, ಕುರಿಕಾಯುವ ಹುಡುಗನೊಬ್ಬನು ಕುರಿಗಳನ್ನು ಅಟ್ಟಿಕೊಂಡು ತಿರುಗಿ ಬರುವಾಗ ಗೋಧೂಳಿಯ ಸಮಯದಲ್ಲಿ ಈಗಲೂ ಆಗಾಗ್ಗೆ ಉಚ್ಚಸ್ವರದಿಂದ ಸ್ವೇಚ್ಛೆಯಾಗಿ ಹಾಡುವನು—

ತಾರೂ !
ಅಖಿಯಾ ಬಿಗಡ ಗಯಿಯ್ಯಾ
ಯಾ ದಾರೂ !*

* ಏ ತಾರೂ, ನಿನ್ನ ವಿರಹದಿಂದ ಅತ್ತು ಅತ್ತು ಈ ಕಣ್ಣುಗಳು ಕೆಟ್ಟು ಹೋಗಿವೆ. ಇವುಗಳಲ್ಲಿ ಕೊಂಚ ಔಷಧ ಹಾಕು !

# ಭಾರತೀಯ ಸಾಹಿತ್ಯ ಪ್ರಕಟನಾಲಯ,
# ಧಾರವಾಡ

---

## ನಮ್ಮ ಯೋಜನೆ

೧. ರಾಜಲಕ್ಷ್ಮೀ (ಶರತ್‌ಬಾಬುಗಳ ಕಥಾಸಂಗ್ರಹ) ಅಚ್ಚಿನಲ್ಲಿ
೨. ಹೃದಯದ ಕೂಗು ,,
೩. ಹಿಂದೀ ಗೀತಗಳು ,,
೪. ಹಿಂದೀ ಸಾಹಿತ್ಯದ ರೂಪರೇಷೆ ,,
೫. ಉರ್ದೂ ಸಾಹಿತ್ಯದ ರೂಪರೇಷೆ ,,
೬. ವಂಗ ಸಾಹಿತ್ಯದ ರೂಪರೇಷೆ ,,
೭. ಗುಜರಾತಿ ಸಾಹಿತ್ಯದ ರೂಪರೇಷೆ ,,
೮. ಮರಾಠಿ ಸಾಹಿತ್ಯದ ರೂಪರೇಷೆ ,,

## ಬಿಡಿ ಮುತ್ತು

ಆರೋಗ್ಯಶಾಸ್ತ್ರಸಾರ ಲೇ. ಶ್ರೀ. ಆರ್. ಎಲ್. ಪಾಟೀಲ
ಬಿ. ಎಸ್‌ಸಿ., ಬಿ. ಟಿ. ೦-೪-೦

## ಪುಸ್ತಕ ಸಿಗುವ ಸ್ಥಳ

ರಾಮಾಶ್ರಯ ಬುಕ್ ಡಿಪೊ, ಧಾರವಾಡ.

ಮತ್ತು

'ಪ್ರತಿಭಾ' ಕಾರ್ಯಾಲಯ, ಧಾರವಾಡ.

---

ಮುದ್ರಕರು : ಶಿವಪ್ಪ ಫಕೀರಪ್ಪ ಹರಣೆ, ಕೃಪಾಸಿಂಧು ಮುದ್ರಣಾಲಯ, ಧಾರವಾಡ.

ಪ್ರಕಾಶಕರು : ಶ್ರೀ. ಗುರುನಾಥ ಮಹಾದೇವ ಜೋಶಿ, ಭಾರತೀಯ ಸಾಹಿತ್ಯ ಪ್ರಕಟನಾಲಯ, ಧಾರವಾಡ.